ಕೊರವಂಜಿ



ಜೂನ್

೧೯೪೭

★

ಸಂಪಾದಕರು :


ಶ್ರೀ॥ ರಾ. ಶಿ.

ಬರಹಗಾರರು :

ಶ್ರೀ॥ ಪಾಟಾಳಿ
ಶ್ರೀ॥ ದಾಶರಥಿ ಧೀಕ್ಷಿತ್
ಶ್ರೀ॥ ಕಾಮತ್
ಶ್ರೀ॥ ಶನಿ
ಶ್ರೀಮತಿ ಸುನಂದಮ್ಮ
ಶ್ರೀ॥ ರುದ್ರಪ್ಪ
ಶ್ರೀ॥ "ಕೇಫ"
ಶ್ರೀ॥ ಅ. ರಾ. ಸೇ.
ಶ್ರೀ॥ ಬಚ್ಚ
ಶ್ರೀ॥ ವೇದಾಂತಿ ಬಚ್ಚ

ಇತ್ಯಾದಿ, ಇತ್ಯಾದಿ.

ಬಿಡಿ ಪ್ರತಿ



ಶೀಘ್ರದಲ್ಲಿಯೇ ಬರುತ್ತದೆ!
ಭರಣಿ
ಪಿಕ್ಚರ್ಸ್‌ರವರ
ಚಿಂತಾಮಣಿ
...ತೆಲುಗು...
ಭಾನುಮತಿ
ಜಮುನ
N.T.ರಾಮರಾವ್
S.V.ರಂಗರಾವ್
V.T.D. Release...


ಎಲ್ಲಾ ಬಗೆಯ ಮರಕೆಲಸಕ್ಕೆ...ಒಳಭಾಗಕ್ಕೆ ಯಾ ಹೊರಭಾಗಕ್ಕೆ ಬಳಿ ಯುವದಕ್ಕೆ
ಎಲ್ಲಾ ಹವಾಗುಣದಲ್ಲಿಯೂ ನಿಲ್ಲುವಂತೆ ತಯಾರಿಸಿರುವುದು
ತೊಳೆಯಬಹುದಾದ ಗೋಡೆಯಮೇಲೆ ಬಳಿಯುವ ಫ್ಲಾಟ್ ಪೇಯಿಂಟ್
ಷಾಲಿಮಾರ್
ವುಡ್‌ಕೋಟ್
ರೆಡಿಮಿಕ್ಸ್ಡ್ ಪೇಯಿಂಟ್
ಒಳ್ಳೇ ಹೊಳಪಿರುವ, ಬಹಳ ಬಾಳಿಕೆಯುಳ್ಳ ರೆಡಿಮಿಕ್ಸ್ಡ್ ಬಣ್ಣ
ಷಾಲಿಮಾರ್
ಲಸ್ಟ್ರಾಲ್
ಅಲ್ಯೂಮಿನಿಯಂ ಪೇಯಿಂಟ್
ವಿಸ್ತಾರ ಮೇಲ್ಮೈ ಪ್ರಸರಣ ಶಕ್ತಿಯುಳ್ಳದ್ದು
ಷಾಲಿಮಾರ್
ಮ್ಯಾಟ್‌ಕೋಟ್
ಫ್ಲಾಟ್ ವಾಲ್ ಪೇಯಿಂಟ್
ಒಳಭಾಗದ ಗಾರೆ, ಕಾಂಕ್ರೀಟು, ಮತ್ತು ಮರಕ್ಕೆ ಹಿಡಿಯುವುದು. ಬಾಳಿಕೆವುಳ್ಳದ್ದು.
ಅತ್ಯುತ್ತಮವಾದ ಸಕಲಕಾರ್ಯಗಳಿಗೂ ಉಪಯೋಗಿಸಬಹುದಾದ ಎನಾಮಲ್
ಅನೇಕ ತರದ ಕೈಗಾರಿಕೆ ಮತ್ತು ಮನೆಕೆಲಸಗಳಿಗೆ ಉಪಯೋಗಕ್ಕೆ ಬೀಳುವುದಲ್ಲದೆ ಯಾವುದರಮೇಲೂ ಬಳಿಯಬಹುದು ಬ್ರಷ್ಷಿನಿಂದ ಬಳಿಯಬಹುದು, ಸ್ಪ್ರೇ ಮಾಡಬಹುದು ಅಥವಾ ಬಣ್ಣದಲ್ಲಿ ಅದ್ದಲೂಬಹುದು; ಆಗಿಂದಾಗ್ಗೆ ತೊಳೆದರೂ ಬಣ್ಣ ನಿಲ್ಲುವುದು
ಷಾಲಿಮಾರ್ ಸೂಪರ್‌ಲ್ಯಾಕ್
ಷಾಲಿಮಾರ್ ಸೂಪರ್‌ಲ್ಯಾಕ್
SHALIMAR PAINT
SHALIMAR PAINT, COLOUR & VARNISH CO., LTD.,
"Karim Manzil", Kumbarpet Road, Bangalore City-2.
Telephone No. 3607

ಕೊರವಂಜಿ

ಬಳೇಪೇಟೆ : : ಬೆಂಗಳೂರು 2

ಕೊರವಂಜಿಯು ತಿಳಿನಗೆಯ ಸಚಿತ್ರ ಮಾಸಪತ್ರಿಕೆ. ತಿಳಿಹಾಸ್ಯದ ಲೇಖನಗಳು ಹರಟೆಗಳು, ಅಣಕವಾಡುಗಳು, ನಗೆ ಹಾಡುಗಳು ಇವುಗಳಿಗೆ ಸರ್ವದಾ ಸುಸ್ವಾಗತವುಂಟು. ಆದರೆ ವ್ಯಕ್ತಿಯನ್ನುದ್ದೇಶಿಸಿ ಬರೆದ ಲೇಖನಗಳಿಗೆ ಎಡೆಯಿಲ್ಲ.

ಲೇಖನಗಳನ್ನು ಕಳುಹಿಸುವವರು ತಮ್ಮಲ್ಲಿ ಒಂದು ಪ್ರತಿಯನ್ನಿಟ್ಟುಕೊಂಡರೆ ಬಹಳ ಒಳಿತು. ಸುಲಭವಾಗಿ ಓದುವಂತೆ ತಿಳಿಬರಹದಲ್ಲಿ ಬರೆದರೆ, ಅಚ್ಚಾದಾಗ ತಪ್ಪು ನೆಪ್ಪುಗಳು ಕಡಿಮೆಯಾಗುವುವು ಒಪ್ಪಿದ ಲೇಖನಗಳಿಗೆ ಪ್ರತ್ಯುತ್ತರ ಉಂಟು.

ಸಂಪಾದಕೀಯ ಪತ್ರವ್ಯವಹಾರಗಳನ್ನು ಸಂಪಾದಕರಲ್ಲೂ ವ್ಯವಸ್ಥಾಪಕರಲ್ಲಿ ಮಿಕ್ಕ ವಿಚಾರಗಳನ್ನೂ ಪ್ರಸ್ತಾಪಿಸಬೇಕು.

ವಾರ್ಷಿಕ ಚಂದಾ ಅಂಚೆ ಮೂಲಕ ರೂ. ೩—೦—೦
ಬಿಡಿ ಪ್ರತಿ ಕೇವಲ ಆಣೆ ೦—೪—೦

ಚಂದಾದಾರರು ವಿಳಾಸ ಬದಲಾವಣೆಯಾದಲ್ಲಿ, ಕೂಡಲೆ ನಮಗೆ ತಿಳಿಸಿದರೆ ಬಹಳ ಸಹಾಯ ಮಾಡಿದಂತಾಗುವುದು.

ಕೊರವಂಜಿ

A. ANANTHIAH

ಸಂಪುಟ ೧೬ ಜೂನ್ ೧೯೫೬ ಸಂಚಿಕೆ ೩

★ ಕುಹಕಿಡಿಗಳು ★

ಮೊದಲನೆಯ ಪಂಚವಾರ್ಷಿಕ ಯೋಜನೆಯು ಯಶಸ್ವಿಯಾಗಿ ಪ್ರತಿಯೊಬ್ಬನ ಸಂಪಾದನೆಯೂ ಶೇಕಡಾ ೧೮ರಷ್ಟು ಹೆಚ್ಚಿದೆಯೆಂದು ವರದಿ.

—ನಮ್ಮೂರಿನಲ್ಲಿ ಅಲೋಯಸ್ಸ್ ಖೋತಾ ಪ್ರಯುಕ್ತ ಶೇಕಡಾ ೨೮ರಷ್ಟು ಇಳಿತಾಯವಾಗಿರುವುದು, ಜನರಿಗೆ ತಿಳಿದಂತೆ ಕಾಣಲಿಲ್ಲ

*　　　*　　　*

ಪಾಂಡಿಚೆರಿಯಲ್ಲಿ ಆಗುತ್ತಿರುವ ರಾಜಕೀಯ ಬದಲಾವಣೆಗಳಲ್ಲಿ ಸಾಕಷ್ಟು ಉಪ್ಪುಕಾರ ಇಲ್ಲ ಎಂದೊಬ್ಬರು ನಾಯಕರು.

—ಪಾಂಡಿಚೆರಿ, ಬೊಂಬೆಗಳಿಗೆ ಪ್ರಸಿದ್ಧಿ ಅಲ್ಲವೇ ?

*　　　*　　　*

ಕಾಶ್ಮೀರದ ವಿವಾದದಲ್ಲಿ ನಾವು ಯಶಸ್ವಿಯಾಗುತ್ತೇವೆ. (ನೆಹ್ರೂ)

ಕಾಶ್ಮೀರದಲ್ಲಿ ನಾವು ಯಶಸ್ವಿಯಾಗುತ್ತೇವೆ. (ಪಾಕಿಸ್ಥಾನ)

—ಅರ್ಥಗರ್ಭಿತ ಅಲ್ಲವೇ ?

*　　　*　　　*

ಅಖಂಡ ಕರ್ಣಾಟಕವಾದ ಮೇಲೆ "ಮಂಗಳೂರು ಮಲ್ಲಿಗೆ" ಎಂದು ಹೂವು ಮಾರುವವರು ರಸ್ತೆಗಳಲ್ಲಿ ಕೂಗುತ್ತಾರೆಂಬುದು ಖಚಿತವಲ್ಲವಂತೆ.

*　　　*　　　*

ಪಾಕಿಸ್ಥಾನದ ರಾಜಕೀಯ ಆಂದೋಳನವನ್ನು ನೋಡಿ ಅಮೇರಿಕನ್ನರು ಹಿಂದು ಮುಂದು ನೋಡುತ್ತಿದ್ದಾರಂತೆ.

—ಅಮೆರಿಕನ್ನರನ್ನು ರಷ್ಯಾದವರೂ ಹಿಂದು ಮುಂದು ನೋಡುತ್ತಿದ್ದಾರಂತೆ.

* * *

ಮದ್ರಾಸಿನಲ್ಲಿ ಖೂನಿಯಾದ ನಾಯಿಯೊಂದಕ್ಕೆ ಮೂರು ಸಾವಿರ ಬೆಲೆ ಎಂದು ಓದಿದ ನಮ್ಮ ಕಾಲೇಜ್ ತರುಣ—ಮಾವಯ್ಯನಿಗೆ ಹೇಳಿದನಂತೆ.

"ನೋಡೀ ಮಾವಯ್ಯಾ! ಆ ನಾಯಿಗಿಂತ ನಾನು ಕಡೆಯಾದನಲ್ಲಾ! ನನಗೆ ಸಾವಿರ ರೂಪಾಯಿ ಮಾತ್ರ ಕೊಟ್ಟಿರಲ್ಲ" ಎಂದು.

* * *

ಈ ಸಾರಿ ಬೊಂಬಾಯಿನ ಎ. ಐ. ಸಿ. ಸಿ. ಯಲ್ಲಿ ಕಾಂಗ್ರೆಸ್ ಕಡೆಯದಾಗಿ ಕಾಂಗ್ರೆಸಿಗರ ಬೆಂಬಲಕ್ಕೇ ಆಶಿಪಟ್ಟಿತಂತೆ.

* * *

ಲೆಕ್ಕದ ಮೇಷ್ಟರ ಹೆಂಡತಿ ಅವಳಿ ಮಕ್ಕಳನ್ನು ಹೆತ್ತಳಂತೆ.

—ಯಥಾಪ್ರಕಾರ ತಪ್ಪು ಉತ್ತರ.

* *

ಆಚಾರ್ಯರು ಆತ್ಮ ಶುದ್ಧಿಗಾಗಿ ಮೂರು ದಿನ ಉಪವಾಸ ವ್ರತ ಹಿಡಿದಿರುವರಂತೆ.

—ನಮ್ಮೂರು ಆಚಾರ್ಯರು ನಾಲ್ಕನೇ ದಿನದ ಹಬ್ಬಕ್ಕೆ ಹಾಜರು.

* * *

ಮಾನ್ಯ ಸಚಿವರು ಹೊಸ ಹಲ್ಲು ಕಟ್ಟಿಸಿಕೊಂಡಿದ್ದಾರಂತೆ.

—ಕೊಟ್ಟ ಭಾಷೆಯನ್ನು ಈಗ ಸುಲಭವಾಗಿ ಅಗಿಯಬಹುದಲ್ಲವೇ?

* * *

ದೇಶದ ಹಿತಕ್ಕಾಗಿ ಏನನ್ನಾದರೂ ಮಾಡುತ್ತೇನೆ ಎಂದನಂತೆ, ತುಂಬಿದ ಸಭೆಯಲ್ಲಿ ರಾಜಕಾರಣಿ.

—ಭಾಷಣ ಬಿಗಿಯೋದು ಬಿಟ್ಟರೆ ಸಾಕು, ಅಲ್ಲವೇ?

* * *

ಈಗಿನ ಕಾಲದಲ್ಲಿ ಭೀಷ್ಮ ಪ್ರತಿಜ್ಞೆ ಅಂದರೆ ಅಪ್ಪನ ಎರಡನೆ ಮದುವೆಯನ್ನು ತಪ್ಪಿಸೋದು. ಅಲ್ಲವೇ?

* * *

ಉರಿಗಾಳು

ವಾಸಗೃಹಗಳ ನಡುವೆ ಧ್ವನಿವರ್ಧಕ ಯಂತ್ರಗಳ ಮೂಲಕ ಗದ್ದಲ ಮಾಡುತ್ತಿರುವುದರಿಂದ, ಹೃದಯರೋಗಗಳು ಹೆಚ್ಚುತ್ತಿವೆ, ಎಂದು ಮದ್ರಾಸ್ ಡಾಕ್ಟರೊಬ್ಬರು ಹೇಳಿದ್ದಾರೆ....ಆ ಯಂತ್ರಗಳನ್ನು ಹಚ್ಚುವವರ ಹೃದಯ ಇದರಿಂದ ಅರಳುತ್ತದೆ, ಎಂಬುದನ್ನು ಅವರು ಮರೆತರಲ್ಲಾ.

* * *

ಕೋಲಾರದ ಬಳಿ ಅತ್ಯಾಧುನಿಕ ರೀತಿಯ ಸಿಗರೇಟ್ ಕಾರ್ಖಾನೆಯೊಂದನ್ನು ಸ್ಥಾಪಿಸಲಾಗುವುದಂತೆ........ಅಂದ ಮೇಲೆ, ಫಸ್ಟ್ ಗ್ರೇಡ್ ಕಾಲೇಜು ಕೂಡ ಶೀಘ್ರದಲ್ಲೇ ಸ್ಥಾಪಿಸಬಹುದು.

* * *

ಸರ್ವೇ ಸಾಮಾನ್ಯ ರೀತಿಯ ಆಡಿಟ್ ವಿಮಾ ಕಾರ್ಪೊರೇಷನ್ನಿಗೆ ಸರಿ ಹೋಗುವುದಿಲ್ಲವೆಂದು ಮಾನ್ಯ ಶ್ರೀ ದೇಶಮುಖ್‌ರವರು ಹೇಳಿದರಂತೆ....ಆದರೆ, ಸರ್ವೇ ಇಲಾಖೆಯವರು ಇದಕ್ಕೆ ಏನುತ್ತರ ಹೇಳುವರೋ ತಿಳಿಯದು.

* * *

ವಿನೋಬಾರವರ ಗ್ರಾಮಾಯಣ ರಾಮಾಯಣಕ್ಕಿಂತ ಶ್ರೇಷ್ಠ, (ಭಾಷಣ) ಅದಕ್ಕಿಂತ ಸಂಗ್ರಾಮಾಯಣವೇ ಶ್ರೇಷ್ಠ, ಎಂದು ಕಮ್ಯುನಿಸ್ಟರು ಹೇಳುತ್ತಿರುವರಂತೆ.

* * *

ತೈಲ ಉತ್ಪಾದನೆಗೆ ಮುಂದಿನ ೫ ವರ್ಷಗಳಿಗೆ ೩೦ ಕೋಟಿ ರೂಪಾಯನ್ನು ಮಂಜೂರು ಮಾಡಲಾಗಿದೆ....ಅಂದರೆ, ಬಟ್ಟತಲೆಯವರ ಸಂಖ್ಯೆಯನ್ನು ವಜಾ ಮಾಡಿದಾರೆ, ಎಂಬುದು ಸ್ಪಷ್ಟ.

* * *

ಹೊಸದಾಗಿ ಜನಿಸಿದ ಮಕ್ಕಳ ಮೆದುಳುಗಳನ್ನು ಸಂರಕ್ಷಿಸಲು ರಷ್ಯನ್ ಆಸ್ಪತ್ರೆಗಳಲ್ಲಿ ಹೊಸ ವಿಧಾನವೊಂದನ್ನು ಕಂಡು ಹಿಡಿದಿದಾರಂತೆ ... ಅಂದರೆ, ಆ ಮೆದುಳುಗಳು ಕಮ್ಯೂನಿಸಂ ಪರವಾಗಿಯೇ ಆಮರಣಾಂತ ಸಂರಕ್ಷಿಸಲ್ಪಡ ಬಹುದಲ್ಲವೆ ?

ಬುದ್ಧ ಜಯಂತಿಯ ೧೦೦೦ದ ವಾರ್ಷಿಕೋತ್ಸವವನ್ನು ಹಿಂದೆ ಭಾರತದಲ್ಲಿ ವೈಭವದಿಂದಾಚರಿಸಲಾಗಿತ್ತೆಂದೂ, ಆದ್ದರಿಂದಲೇ ಬೌದ್ಧಮತ ದೇಶದಿಂದ ಮಾಯ ವಾಯಿತೆಂದೂ, ಹಲವರು ಟೀಕಿಸುತ್ತಿರುವುದು ಕೇವಲ ಊಹೆ, ಎಂದು ತಿಳಿದು ಬಂದಿದೆ.

* * *

ಹೈಡ್ರೋಜನ್ ಬಾಂಬು ಬಿದ್ದರೆ, ಸುತ್ತಲ ೫೦ ಮೈಲಿ ಪ್ರದೇಶ ನಿರ್ನಾಮ ವಾಗುತ್ತದೆ, ಎಂದು ಅಮೇರಿಕನರು ಪ್ರಕಟಿಸಿರುವುದರಿಂದ ಇನ್ನು ಮೇಲೆ ಜನರು ಹಳ್ಳಿಗಳನ್ನು ತೊರೆದು ದೊಡ್ಡ ದೊಡ್ಡ ನಗರಗಳಿಗೆ ಧಾವಿಸುವುದು ನಿಲ್ಲಬಹು ದೆಂದೊಬ್ಬರು ಬರೆದಿದ್ದಾರೆ.

* * *

ಒಂದು ದೇಶ ಇನ್ನೊಂದು ದೇಶದ ಬಗ್ಗೆ ಹೇಗೆ ವರ್ತಿಸಬೇಕೆಂಬುದರ ಬಗೆ ಭಾರತೀಯರಿಗೆ ಪಾಠ ಕಲಿಸಬೇಕಾಗಿದೆ, ಎಂದು ದಕ್ಷಿಣ ಆಫ್ರಿಕಾ ಪ್ರಧಾನಮಂತ್ರಿ ಹೇಳಿದರು....ಆದರೆ, ಆ ದೇಶದ ಶಾಲೆಗಳಲ್ಲಿ ಯಾವುದಕ್ಕೂ ಆತ ಭಾರತೀಯರನ್ನು ಸೇರಿಸುವುದೇ ಇಲ್ಲವಲ್ಲಾ.

* * *

ಹೈದರಾಬಾದಿನ ೧೫ ನೌಕರರನ್ನು ಹೊಸ ಮೈಸೂರಿಗೆ ಕಳುಹಿಸಲಾಗುವು ದಂತೆ....ನಮಗೆ ಶೇಕಡ ೧೦೦ ನೌಕರರೇ ಬೇಕು, ಶೇಕಡ ೧೫ ನೌಕರಿ ಮಾಡಬಲ್ಲ ವರು ಆಗಲೇ ನಮ್ಮಲ್ಲಿ ತುಂಬಿ ಹೋಗಿದಾರೆ, ಎಂದು ಮೈಸೂರು ಸರ್ಕಾರ ಪ್ರತಿಭ ಟಿಸುತ್ತಿರುವರಂತೆ.

* * *

ಕನ್ನಡ ಪ್ರಾಂತ್ಯ "ಕರ್ನಾಟಕ" ಎಂದೇ ಕರೆಯಲ್ಪಡಲಿ, ಎಂದು ಕೆ.ಪಿ.ಸಿ.ಸಿ. ಅಧ್ಯಕ್ಷರವರು ಮಾಡಿಕೊಂಡರಂತೆ. ಆದರೆ ಅದನ್ನು ಕನ್ನಡ ಪ್ರಾಂತ್ಯ ಅಂತ ಕರೆದವರು ಯಾರು ?

* * *

ಕೊರವಾವಲೋಕನ

ಹದವಾಗಿ ಇಂಗು, ಕೊತ್ತುಂಬರಿ, ಉಪ್ಪು, ನಿಂಬೇರಸ, ಹಾಕಿ ಲಕ್ಷಣವಾಗಿ ಕಡೆದಿದ್ದ ಕಣ್ಣಿಗಿಂಪಾದ ಒಂದು ಲೋಟಾ ನೀರುಮಜ್ಜಿಗೆಯನ್ನು ಕ್ಲಬ್ಬಿನ 'ಬೇರರ್' ತಂದಿರಿಸಿದ. ಒಂದು ಗುಟುಕು ಬಾಯಿಗೆ ಸೆಳೆದುಕೊಂಡೆ. ಅದರ ರುಚಿ ಹೇಗಿತ್ತು ಅಂತೀರಿ, ನುಂಗಲು ಮನಸ್ಸೇ ಬರದು. ಇನ್ನೊಂದು ಗುಟುಕಿನ ಆಸೆಗಾಗಿ ಅದನ್ನು ನುಂಗಿದೆ. ಪ್ರಸನ್ನನಾದ. 'ಬೇರರ್' ಎಂಪು ಕೂಗಿದೆ. ಅವ ಪ್ರತ್ಯಕ್ಷನಾದ. "ಈ ನೀರುಮಜ್ಜಿಗೆ ಯಾರು ಮಾಡಿ ತಂದರೋ ಅವರ ತೋಳಿಗೆ ಥೋಡಾ ಹಾಕಿಸಬೇಕೆಂದಿದ್ದೇನೆ. ಆ ನಳಗೋತ್ರದವನನ್ನೂ ಕರೆದುಕೊಂಡು ಬಾ" ಎಂದು ಸುಗ್ರೀವಾಜ್ಞೆ ಇತ್ತೆ.

ಬೇರರ್ ಹಿಂದುಗಡೆಯೇ ಕೊರವ ನಡೆದು ಬಂದ. ತೋಳನ್ನು ಚಾಚಿದ. ನಾನು ಮನೆಯಲ್ಲಿ ಮಾಡಿಸಿ ತಂದೆ ಈ ಕ್ಲಬ್ಬಿನ ಪಾಪಿ ಮೆಂಬರುಗಳಿಗೆ ಒಂದು ದಿನವಾದರೂ ಸೊಗಸಾದ ಭಾರತ ಪಾನೀಯ ದೊರಕಲೆಂದು ಒಂದು ಕಡಾಯಿ ತುಂಬ ಮಾಡಿಸಿ ತಂದೆ. ಇದೇ ಯುಗಾದಿಯ ಕಾಣಿಕೆ, ನನ್ನ ಕ್ಲಬ್ ಮಿತ್ರರಿಗೆ ಎಂದ.

ನಿನಗೆ ಏನು ಥೋಡಾ ಹಾಕಲೋ ? ನೀನು ಇತರರಿಗೆ ಈ ವರ್ಷದ ಹೆಚ್ಚಿನ ದಿನ ಏನೇನು ಥೋಡಾ ಹಾಕುತ್ತಿ ಹೇಳು ಮಜ್ಜಿಗೆ ಕುಡಿಯುತ್ತಾ ಕೇಳುತ್ತೇನೆ ಎಂದೆ. ಅವ ಅಂದ ಗಾದೆಗಳ ಥೋಡಾ ತೊಡಿಸುತ್ತೇನೆ ನೋಡು! ಕೇಳು!! ಅಂತ.

ಮನೆಯ ಮಾರಿ ಪರದೇಶದ ಉಪಕಾರಿ ಯಾರು ?........
ಹೊತ್ತಿಲ್ಲದ ಹೊತ್ತಿನಲ್ಲಿ ತಾತ ತಾನೇ ರಾಜ್ಯವಾಳಿದ ಯಾರು ?........
ಇರುಳು ಕಂಡ ಭಾವಿಯಲ್ಲಿ ಹಗಲಲ್ಲೇ ಬಿದ್ದ ಸಮಿತಿ ಯಾವುದು ?.... ...
ದನದ ಮನಸ್ಸೂ ದಾಯಾದಿ ಮನಸ್ಸೂ ನಂಬಬೇಡ, ಕಾಶ್ಮೀರದಲ್ಲಿ ಯಾಕೆ ?.... ...
ಆಂಧ್ರದ ಹುಣ್ಣಿಗೆ ಕನ್ನಡಿ ಹಿಡಿದ ಭೂಪತಿ ರಂಗ ಸೋತ ಏಕೆ ?........
ಉತ್ತರದ ಮೈಯೆಲ್ಲಾ ಚಿನ್ನ ! ದಕ್ಷಿಣದ ಕಿವಿ ಹಿತ್ತಾಳೆ ಎಂದರು ಯಾರು ?........
ಅಜ್ಜಿ ನೂತದ್ದೆಲ್ಲಾ ಅಜ್ಜನ ಅಂಡಾಜಿಗೇ ಸಾಲದು ಎಂದ ನಂದ ಯಾಕೆ ?.... ...

ಎಂತಹ ಚಿನಾಲಿ ಸಂಸ್ಥೆ ಅಂತೀರಿ, ಟೋಪಿ ತೋರಿಸಿ

ಟೋಪಿ ಹಾಕುತ್ತೆ ಯಾವುದು ?........

ತಾಯಿಯಂತೆ ಮಗಳು–ನೂಲಿದಂತೆ ಅಂಬರ–ಬದುಕಿದವರು- ಯಾರು ?........

ಸಾಕಯ್ಯಾ ! ಕೊರವ ಇಷ್ಟಕ್ಕೂ ಉತ್ತರ ಹುಡುಕುತ್ತೇನೆ ಯುಗಾದಿ ದಿನ-ಎಂದು ಲೋಟಾ ಮುಗಿಸಿ ನಾನೆದ್ದೆ ; ಚಪ್ಪರಿಸುತ್ತಾ.

ಬೇವೂ ಆಯಿತು ! ಬೆಲ್ಲವೂ ಆಯಿತು ! !

* * *

ಮಾವ ಐಶ್ವರ್ಯವಂತಾನ್ನೀ, ಮಗಳು ಪದವೀಧರೆ ಅನ್ನಿ, ಅದಕ್ಕೂ ಮಿಗಿಲಾಗಿ ಲಿಪ್‌ಸ್ಟಿಕಾಧರೆ ಅನ್ನಿ, ಬಡವನ ಮಗ ಅಳಿಯ ಅನ್ನಿ, ಮಸಲಾ ಸ್ವಲ್ಪ ಅಂಜುಬುರುಕ ಅಳಿಯಾ ಅಂತಲೂ ಅನ್ನಿ, ಮಾಡಬಾರದ ತಪ್ಪನ್ನ ಹೆಂಡತಿ ಮಾವನಿಗೆ ಕಾಣಿಸೋಹಾಗೆ ಮಾಡುತ್ತಾನೆ ಅನ್ನಿ, ಉದಾಹರಣೆಗೆ:—ಮೂರು ಜನರೂ ಕಬ್ಬನ್ ಪಾರ್ಕಿನಲ್ಲಿ ಸಂಜೆ ಅಡ್ಡಾಡುತ್ತಿದ್ದಾಗ, ಅಲ್ಲೇ ನಡೆದಾಡುತ್ತಿದ್ದ ಬಿಂಕುಗಾರ್ತಿಯ ಕರವಸ್ತ್ರ ಅಕಸ್ಮಾತ್ ಬಿದ್ದುಹೋಯ್ತು ಅನ್ನಿ, ಅದನ್ನ ಅಳಿಯ ಓಡಿ ಹೋಗಿ ತೆಗೆದು ಕೊಡವಿ ಆಕೆಗೆ ಕೊಡುತ್ತಾನೆ ಅನ್ನಿ, ಆಕೆ ನಸುನಗುತ್ತಾಳೆ ಅನ್ನಿ, ಅಳಿಯ ಬೆವತು ಹಿಂದಕ್ಕೆ ಬಂದ ಅನ್ನಿ.

ಆಗ ಮಗಳ ಕ್ರೂರ ದೃಷ್ಟಿ ಅವನ ಮೇಲೆ ಬಿತ್ತು ಎನ್ನಿ, ಮಾವನ ರಾಹು ದೃಷ್ಟಿಯೂ ಅದಕ್ಕೆ ಸೇರಿತು ಎನ್ನಿ, ಮೂವರೂ ಕಾರಿನಲ್ಲಿ ಕೂತಾಗ, ಮಗಳು ಕಾರನ್ನು ಡ್ರೈವ್‌ಮಾಡುವಾಗ ಅಳಿಯ ಈ ಕಡೆ ಆ ಕಡೆ ವಾಲಿ ಜೋಕಾಲಿ ಆಡುವಂತಾಗಿಸುತ್ತಾಳೆ ಎನ್ನಿ, ಮನೆಗೆ ಬಂದನಂತರ ಅಳಿಯನ ಮುಖದ ನೀರನ್ನು ಅತ್ತೆಯ ಕೈಲೇ ಬಿಡಿಸುತ್ತಾರೆ ಎನ್ನಿ, ಅಂತಹ ಹೆಣ್ಣುಕಕ್ಕ ಅಳಿಯನ ಮುಖ ಆ ರಾತ್ರಿ ಹೇಗಿರುತ್ತದೋ ಹಾಗಿತ್ತು ಕೊರವನ ಮುಖ ಸಂಜೆ ಐದು ಗಂಟೆಗೇ ಅವ ಕ್ಲಬ್ಬಿಗೆ ಬಂದಾಗ.

"ಏನೋ ! ಇಷ್ಟುಬೇಗ ಬಂದುಬಿಟ್ಟೆ ! ಈ ದಿನ. ಮುಖ ಯಾಕೆ ಹೀಗೆ ಹಾಳು ಸುರಿಯುತ್ತಾ ಇದೆ ! ಏಕೆ ? ಹೆಂಡತಿ ತೌರಿಂದ ಹಿಂದಕ್ಕೆ ಬಂದೇಬಿಟ್ಟಳೇ ? ಇಲ್ಲಾ, ಕೇಂದ್ರ ಸರ್ಕಾರ ಹೊಸ ತೆರಿಗೆ ಹೂಡುತ್ತೇವೆ ಎಂದು ಸೂಚನೆ ಕೊಟ್ಟರೇ ? ಅಥವಾ ಬೂಡ್ಸಿನ ಮೊಳೆ ಎದ್ದು ಅಂಗಾಲು ಕುಕ್ಕುತಿದೆಯೇ ? ಎಂದು ಕನಿಕರದಿಂದ ಪರಿತಪಿಸುವ ಧನಿಯಲ್ಲಿ ನಾವೆಲ್ಲಾ ಕೇಳಿದೆವು.

ಪಾತಾಳಭಾಮಿಯಲ್ಲಿ ಬಿದ್ದವ ಅತ್ತನೇನು ? ಅತ್ತೆ ಮನೆಯ ಸೊಸೆ ತುತ್ತು ನುಂಗಿದಳೇನು ? 'ದಾಶರಥಿ' ಕತೆಯನ್ನು ಮುಗುಮ್ಮಾಗಿ ಓದಿದರೇನು ?

ಇಲ್ಲ! ಕೊರವ ಕಿರುದನಿಯಲ್ಲಿ ಉತ್ತರ ಹೇಳಲು ಶುರುಮಾಡಿದ್ದ. ಅಷ್ಟೇ!!

"ನೋಡೀಪ್ಪಾ! ಈ ಕಾಲೇಜುಗಳು ಶುರುವಾಯ್ತು. ಯಾರೋ ಎಲ್ಲೋ ಗುಲ್ಲೆಬ್ಬಿಸಿದ್ದಾರೆ. ಎಂಜಿನಿಯರಿಂಗ್ ಕಾಲೇಜಿನ ಪ್ರಿನ್ಸಿಪಾಲರು ನನ್ನ ಜತೆ ಗೋಲಿ ಆಡ್ತಾ ಇದ್ದೋರು, ಮೆಡಿಕಲ್ ಕಾಲೇಜಿನ ಪ್ರಿನ್ಸಿಪಾಲರ ಮಗ ನನ್ನ ಜತೆ ಇಸ್ಪೀಟ್ ಆಡ್ತಾ ಇದ್ದೋನು ಅಂತ. ತೊಗೊಳ್ಳಿ ಬೆಳಿಗ್ಗೆ ಎಬ್ಬಿಸುವವರು ಸೀಟಿನವರು, ಊಟಕ್ಕೆ ಕೂತಾಗ ಸೀಟಿನವರು, ಕಾಫಿ ಬಟ್ಟಲಿಗೆ ಬಾಯಿಟ್ಟರೆ ಬಾಗಿಲಲ್ಲೇ ಸಾರ್ ಅಂತ ಸೀಟಿನವರು. ಹೀಗಾಗಿ ಮನೆಯಲ್ಲಿರುವುದಕ್ಕೆ ಕಷ್ಟವಾಗಿದೆ. ಅದಕ್ಕೇ ಬೇಗ ಕ್ಲಬ್ಬಿಗೆ ಬಂದೆ ಅಂತಂದ.

ಆ ವೇಳೆಗೆ ಚಾಲೂಕಿನ ನವ್ಯರಮಣಿಯೊಬ್ಬಳು ನಾವು ಕುಳಿತಿದ್ದ ಕಡೆಗೆ ಬಂದಳು. ಯಾರು ಈ ಹೊಸ ಅಪ್ಸರೆ! ಇಷ್ಟು ಲಕ್ಷಣವಾದಾಕೆಯನ್ನು ಕೈಹಿಡಿದ ಪುಣ್ಯಾತ್ಮ ನಮ್ಮ ಕ್ಲಬ್ಬಿಗೇಕೆ ಸದಸ್ಯನಾದ. ಹಾಗಾದರೂ ಇಂತಹ ಚೆಂದುಳ್ಳಿ ಹೆಣ್ಣನ್ನು ಇಷ್ಟು ಧೈರ್ಯವಾಗಿ ಘೋಷಾ ಇಲ್ಲದೆ ಕರೆತರುವ ಧೀರನಾರು? ಎಂದೆಲ್ಲಾ ನಾವು ಯೋಚಿಸುತ್ತಿದ್ದಾಗಲೇ, ಆಕೆ ಕೋಕಿಲ ದನಿಯಲ್ಲಿ "ಶ್ರೀಮಾನ್ ಕೊರವ ಯಾರು? ಅವರನ್ನು ನೋಡಬೇಕಿತ್ತು, ನನ್ನ ಮಗನ ಸೀಟಿನ ಸಲುವಾಗಿ" ಮನೆಗೆ ಹೋಗಿದ್ದೆ ಅಲ್ಲಿ ಸಿಗಲಿಲ್ಲ ಅದಕ್ಕಾಗಿ ಇಲ್ಲಿಗೆ ಬಂದೆ.

ಅಳುಮೊಗದ, ಕಿರುದನಿಯ ಕೊರವ, "ನಾನೇ ತಾಯಿ ಕೊರವ" ಆದರೆ ಕ್ಲಬ್ಬಿನಲ್ಲಿ ನಾನು ಯಾರನ್ನೂ ಭೇಟಿ ಮಾಡುವುದಿಲ್ಲ. ದಯವಿಟ್ಟು ನಾಳೆ ಮನೆಗೆ ಬನ್ನಿ ಎಂದು ಒರಟಾಗಿ ಮಾತಾಡಿ ಸಾಗಿಹಾಕಿದ.

"ಏನು ಬಂತೋ ನಿನಗೆ. ಸುಂದರ ಸ್ತ್ರೀ! ಈ ಅಪಚಾರವೇ?" ಎಂದೆ. "ನಮ್ಮನೆಗೆ ಹೋಗಿ, ನನ್ನ ಹೆಂಡತಿಯನ್ನು ಮಾತಾಡಿಸಿ ಬಂದಿದ್ದಾಳೆ. ಮೊದಲೇ ಸ್ವಲ್ಪ ಗುಮಾನಿ ನಮ್ಮಾಕೆಗೆ, ಓಹೋ! ಇದು ಯಾವುದೋ ವಿಡ್ ವೈಫ್ ಎನ್ನುವ ಅನುಮಾನಸೇರಿದರೆ ನನ್ನ ಮನೆ ಬಾಳು ನಾಯಿಬಾಳು ಮನೆಗೆ ಈಕೆ ಬಂದು ಮಗನಿಗೆ ಸೀಟು ಎಂದು ನನ್ನಾಕೆಗೆ ವೇದ್ಯವಾದರೆ ನಾನು ಬದುಕಬಹುದೇನೋ ಎಂದು ಈ ರೀತಿ ಮಾಡಿದೆ." ಯಾರ ಕಾಲು ಚಪ್ಪಲಿ ಮೊಳೆ ಯಾರ ಮೋಟಾರ ಟೈರನ್ನು ನಿಟ್ಟುಸಿರು ಮಾಡಿಸುತ್ತೋ ಯಾರು ಬಲ್ಲರು? ಎಂದು ವೇದಾಂತವನ್ನೇ ಹೇಳಿಬಿಟ್ಟ.

* * *

ಹರಟೆಯ ಫಲ

ಮನೆಗೆ ಬಂದರೆ .. ಮಡದಿ ? ಸಿಡುಕು !
ಏಕೊ... ಏನೊ.... ಮಿಸ್ಟರಿ !
ಶಾಂತಗೊಳಿಸಲು ತಂತ್ರ ? ಹುಡುಕು ;
ಹರಟು ಬೇಗನೆ, ಹಿಸ್ಟರಿ.

ಪಾಂಚವಾರ್ಷಿಕ ಯೋಜನೆ
ಭಕ್ರ ನಂಗಲ ಕಾಲುವೆ
ಕೃತಕ ಅಕ್ಕಿಯ ಭೋಜನ
ವಿಶ್ವಬ್ಯಾಂಕಿನ ಸಾಲವು

ಅವಳು ಬೆರಳನು ಮುರಿದಳು
ವಿಶ್ವಬ್ಯಾಂಕನು, ಪ್ಲಾನನು,
ರಾಮುಸಾಗರ, ಹೊನ್ನೆಮರಡನು,
ಬಾಯಿ ತೆರೆಯದೆ ಜರಿದಳು.

ಹಣದ ಉಬ್ಬರ ಕೃತಕ ಗೊಬ್ಬರ
ಕಾಫಿ ಟೀ ಬೆಳೆ, ರಬ್ಬರ,
ನಿಲ್ಲಲಿಲ್ಲ.... ಅಬ್ಬರ !
ಜಗಳ ಉಳಿಯಿತು, ಇಬ್ಬರ.

ಮತ್ತೆ ಹೇಳಿದೆ, ಚಿತ್ರರಂಜನ
ಭಾಷೆಯಂತೆ ವಿಭಜನ
ಹೊಸದು ಹಿಂದೂ ಕೋಡಿನ
ವಿವರಿಸಿದೆ.... ಸೆಕ್ಷನ.

ಹೇಳಬಾರದಾಗಿತ್ತು, ನಾನು
ಸಂಸಾರವನೆ ಕೊಚ್ಚಿತು ;
ಕೋರ್ಟು ಅವಳನೆ ಮೆಚ್ಚಿತು,
ಅವಳು ಇಲ್ಲದ ಅವನು, ನಾನು.

—ನಾಟಾಳಿ.

ಅವನೆಂಥ ಸುಖಿ!

ನವ್ಯದೃಶ್ಯ ಕಾವ್ಯ

ಅವನು :—ಜಗವೆಲ್ಲ ಬೆಳಕಾಯ್ತು, ಎರಡುವರೆ ಸಹಸ್ರ ವರ್ಷಗಳ ಹಿಂದೆ.

ಆಕೆ :—ನಾಳೆ ಬೆಳಗಾದರೆ ಅಕ್ಕಿಕಾಳಿಲ್ಲ.

ಅವನು :—ಪುಣ್ಯವಂತನು ಆತ ಸಿದ್ಧಜೀವಿ–ಆ ಬುದ್ಧದೇವ.

ಆಕೆ :—ಅಹುದಹುದು ಬುದ್ಧಜೀವವು ನಿಮ್ಮದೆಂದು ತಾಳಿ ಕಟ್ಟಿಸಿಕೊಂಡಂದೇ ಕಂಡುಕೊಂಡೆ.

ಅವನು :—ಎಲೆ ಮರುಳೆ – ಚೀನಿಯರು ಜಪನಿಯರು – ಲಂಕೆಯಾ ಮಂದಿ ಬುದ್ಧದೇವನ ತತ್ವ ಹಿಂಬಾಲಿಸಿಹರು – ಹುಟ್ಟಿದೂರಿನ ಮಂದಿ ದೂರವಿಟ್ಟರು ಅವನ–ಮರತೆಬಿಟ್ಟರು ಸತ್ಯ.

ಆಕೆ :—ಹಿತ್ತಲದ ಗಿಡವೆಂದು ಹಾಗೆ ಮಾಡಿರಬೇಕು – ಅಕ್ಕಿಯಾ ಚಿಂತೆ ಮರೆತಿಹಿರಾ ?

ಅವನು :—ಮರೆತಿಲ್ಲ ಮೋಹಿನೀ–ಮರೆತಿಲ್ಲ. ಹೊಟ್ಟೆಕಿಚ್ಚಹುದು–ಆ ಸಿದ್ಧಾರ್ಥನಾ ಮಾರ್ಗವ ನೋಡಿ.

ಆಕೆ :—ಉಪ್ಪಿನಾ ಕಾಯಿಗೆ ಮಾವು ಹೆಚ್ಚಿಟ್ಟಿಹೆನು – ಹಾಕಲಿಕೆ ಉಪ್ಪಿಲ್ಲ – ಮೆಣಸಿನಾಕಾಯಿಲ್ಲ.

ಅವನು :—ಬಹು ಪುಣ್ಯವಂತ – ಚೊಚ್ಚಲದ ಕೂಸು – ತಾಯಿ ಯಶೋಧರೆಯು ತೆಕ್ಕೆಯಲಿ ತೂಕಡಿಸಿ ತೆಪ್ಪನೆ ಮಲಗಿರಲು – ಆ ಅರ್ಧರಾತ್ರಿಯಲಿ ಹೊರವಂಟು ನಿಂತಿದ್ದ.

ಆಕೆ :—ಅರಮನೆಯ ಜೀವಿಗಳು–ಉಪ್ಪಿಗೇಂ ಚಿಂತೆಯೇ–ಬಂಗಾರದಾ ಬೆಟ್ಟವನೇರಿ ಕುಳಿತಿರಲುಬಹುದಿತ್ತು. ಅಷ್ಟಸಿರಿ ಇರುವಾಗ ಯಶೋಧರೆಗೇನು ಚಿಂತೆ ?

ಅವನು :— ಎಲೆ ಮರುಳೆ – ಹೆಣ್ಣು ಜೀವದ ಚಿಂತೆ ಬರಿಯ ಉಪ್ಪು ಸಾಸುವೆ ಚಿಂತೆ ಮುಕ್ತಿ ಮಾರ್ಗವನರಸೆ ಹೇ ನರಾಧಮೇ ...

ಆಕೆ :—ಗಂಡ ಹೆಂಡಿರು ನಗುತ–ಉಂಡು ಮಲಗುತಲಿರು ಸ್ವರ್ಗಕ್ಕಿಚ್ಚೆಂದು ನನ್ನ ವಾದ.

ಅವನು :—ಇದುವೆ ವಾದಕೆ ಬೇಸತ್ತು ನಟ್ಟ ನಡುರಾತ್ರಿಯಲಿ ಎದ್ದು ನಡೆದಿದ್ದ ಬುದ್ಧ ಭೂಪತಿ.

ಆಕೆ :—ಈಗ ನಿಮ್ಮ ಮನದಿಂಗಿತವನರುಹು ನರೋತ್ತಮಾ!

ಅವನು :—ಇದುವೆ ಬುದ್ಧ ಪೌರ್ಣಮಿಯ ದಿನ ಜಗಕೆಲ್ಲ ಮೇಲು ಸಾಲಿಗನಾಗಿ ತೊರೆಯುವೆನು ನಿನ್ನನ್ನು ನಿನ್ನ ಕೂಸನ್ನು ನನ್ನ ನೆಮ್ಮದಿಗಾಗಿ.

ಆಕೆ :—ನಿಮ್ಮ ನೆಮ್ಮದಿಯೆ ನನ್ನ ನೆಮ್ಮದಿ ಪ್ರಾಣಕಾಂತಾ.

ಅವನು :—ಬುದ್ಧಂ ಶರಣಂ ಗಚ್ಛಾಮಿ.

ಆಕೆ :—ನಾನುಂ ಗಚ್ಛಾಮಿ ನಿಮ್ಮೊಡನೆ ಅಲ್ಲ....ಹನ್ನೆರಡು ರೂಪಾಯಿ ಕೈಗಿಕ್ಕಿ ಪೋಗುವೆನು ತೌರೂರಿಗೆ.

ಅವನು :—ಆಂ....ಏನೆಂದೆ ?

ಆಕೆ :—ಆ ಬುದ್ಧ ಜಗವ ಬೆಳಗಲು ಮಗುವು ಮಡದಿಯ ಬಿಟ್ಟು ಬೋಧಿವೃಕ್ಷದ ನೆರಳಿನಾಶ್ರಯದಿ, ಆನಂದ ಸುಜಾತರ ಕೂಡೆ ಇರುವಾಗ – ಯಶೋಧರೆ ತೌರೂರಿನಲ್ಲಿರಲಿಲ್ಲವೆ ?

ಅವನು :—ಇರಬಹುದು ಅದಕೇನು ?

ಆಕೆ :—ನೀಂ ಬುದ್ಧಗಳು ಪೋದಾಗ ನಾನೆಲ್ಲಿ ಪೋಗಲಿ ?

ಅವನು :— ಅಂತಾದೊಡಂ........

ಆಕೆ :—ನೀವೀಗಲೇ ತೆರಳಿ ಬೋಧಿವೃಕ್ಷದ ಕೆಳಗೆ....ನಾನೀಗ ಹೊರಡುವೆನು ತೊಂಡೆ ಭಾವಿಗೆ ಎನ್ನ ತೌರೂರಿಗೆ.

ಅವನು :—ಹಾ ಪ್ರಿಯೆ....ಸಂಜೆಯೂಟಕೆ ಸೊಂಡಿಗೆಯ ಕರಿ – ಶ್ಯಾಮಿಗೇಖೀರು ಮಾಡಿರು – ಬಿಸಿ ಬೇಳೆ ಮೊಸರನ್ನ....ಎಂದು ಬರುವುದೊ? ಹಿಂದೆ ತಿಂದೆ ಪೋಪುದು ಲೇಸು.

ಆಕೆ :—ಅಕ್ಕಿ – ಉಪ್ಪು – ಹಾಲು – ಬೇಳೆ – ತುಪ್ಪ – ಅಡಿಕೆ – ಎಲೆ – ಸಕ್ಕರೆ ಎಣ್ಣೆ – ಸುಣ್ಣ – ಸೌದೆ – ಕೊಬರಿ – ಚಕ್ಕೆ – ದಾಲ್ಚಿನ್ನಿ – ಕಲ್‌ಹೂವು ಮರಾಟಿಮುಗ್ಗು – ಊಟದೆಲೆ – ಇಷ್ಟು ಆದರೆ ಸಾಕು – ನಡೆಸೇನು ಸಂಜೆ ಅದ್ಧೂರಿಯಾ ಅಡಿಗೆ – ಸವಿ ಸವಿಯು ಊಟ.

ಅವನು :— ಹಾ! ಪ್ರಾಣಕಾಂತೆ ಇಷ್ಟೆಲ್ಲ ತರುವುದಕ್ಕಿಂತ ಕಾಡುಸೇರುವುದೆಲೇಸು – ಮಡದಿ .. ಮಕ್ಕಳ ಬಿಡುವುದೇ ಲೇಸು – ನೀಂ ತೌರಿಂಗೆ ಪೋಪುದೆ ಲೇಸು ನಾಂ ಬುದ್ಧನಾಗುವುದೆ ಲೇಸು.


ಆಕೆ :—ಎಲೆ ಮರುಳೆ – ಸಂಸಾರ ನಡೆಸಲು ಹೆದರಿ ಆಶ್ರಮವ ಸೇರುವನು ಬುದ್ಧನಾದೇನೆ ಅವಬುದ್ದು ನಿಜ – ಏಳೇಳಿ ಸೊಂಡಿಗೆಯು ಕರಿದಿಹೆನು – ಕಾಲು ತೊಳೆದುಕೊಳ್ಳಿ.

ಅವನು :—ಸಿದ್ಧಿ ಜೀವಿಯೆ ನೀನು – ಎಲೆ ಹಾಕು ನೀಂ ಬಡಿಸು–ಉಂಡು ಮಲಗೋಣಂತೆ – ಅದುವೆ ಮಾನವ ಧರ್ಮ – ನಿಜದ ಜೀವನದರ್ಥ.

ಆಕೆ :—ನಾ ಕಾಣೆನೇ ನಿಮ್ಮ ಮನಸ! ಮೇಲೆ ಮಾತಾಡಿ ಆಚಾರ ಹೇಳಲಿಕೇನು ಮೈಕು ಮುರಿವಂತೆ ಮಾತಿನಮಾಲೆ ಜೋಡಿಸಬಹುದು – ನಡಾವಳಿಯು ಲಿಹುದು.... ಏಳೇಳಿ – ಅಕ್ಕಿ ಬೇಳೆ ತನ್ನಿ – ಇದ್ದಲು ಒಲೆ ಹಚ್ಚುವೆನು.

(ಎಂದಾಗ ಅವನು ಮೂರ್ಛೆ ಹೋಗುವನು. ತೆರೆಬೀಳುವುದು.)

—ದಾಶರಥಿ ಧೀಕ್ಷಿತ್.



ರಾಮನವಮಿ ಬಂತು ಎಂದರೆ ರಾಮಮಂದಿರಗಳು ಈಗೀಗ ಖಾಲಿಯೇ ಅಲ್ಲವೇ ?

ಪೂಂಗಿ

ಹೇಗಾದರೂ ಅವರ ಮನ ಒಲಿಸದೆ, ನನ್ನ ಕೆಲಸ ಸಾಗದು. ಓ ಎಂದರೆ ರೋ ಎಂಪರೆ, ಕೆಲಸಕ್ಕೆ ಕಲ್ಲು. ಅವರು ಓ ಎಂದಾಗ, ನಾನೂ ಓ ಎನ್ನಲೇಬೇಕು. ನನ್ನ ನಿಜ ಅಭಿಪ್ರಾಯ ಏನೇ ಇರಲಿ, ಅವರಂದದ್ದಕ್ಕೆ ಅಸ್ತು ಎನ್ನಲೇಬೇಕು. ಎಂಥವರಿಗೂ, ತಮ್ಮಂತೆಯೇ ವಿಚಾರಮಾಡುವವರನ್ನು ಕಂಡರೆ ಸಂತೋಷ ಉಕ್ಕುವುದು.

ಆದ್ದರಿಂದ ರಷ್ಯಾ ವಿಷಯವಾಗಿ ಅವರು, ಅಲ್ಲಿ ಸಾಮಾನ್ಯ ಜನರಿಗೆ ಸುಖ ಕಡಮೆ ಎಂದಾಗ, ನಾನು, ನನ್ನ ಉತ್ಸಾಹದ ರಭಸದಲ್ಲಿ, "ಹೌದು, ಸಾರ್! ಅಲ್ಲಿ ಒಂದಕ್ಕೂ ಸ್ವಾತಂತ್ರ್ಯವಿಲ್ಲ; ಹೆದರಿ ಸಾಯುವುದೇ ಅಲ್ಲಿ ಎಲ್ಲರಿಗೂ ಮರಣಕ್ಕೆ ದಾರಿ. ಆಡಳಿತದ ಯಮಪಾಶವನ್ನು ಧರಿಸಿರುವ ಹಲವು ಮಂದಿ ರಕ್ಕಸರು......." ಎಂದು ಪ್ರಾರಂಭಿಸಿದೆ.

ಆಗ ಅವರು, "ಆದರೂ, ಆ ದೇಶದಲ್ಲಿ ಅದ್ಭುತವಾದ ಪ್ರಗತಿ ...." ಎಂದು ನನ್ನ ಮಾತಿಗೆ ಅಡ್ಡಬಂದರು. ಆ ಜಾಡನ್ನೇ ಹಿಡಿದು ನಾನು, "ಹೌದು, ಅನ್ನಿ! ರಷ್ಯಾ ದೇಶದ ಪರಿಸ್ಥಿತಿಯನ್ನರಿತವರಾರೂ ಅವರ ಆಡಳಿತಕ್ರಮವನ್ನು ಅಲ್ಲಗಳೆಯುವುದಿಲ್ಲ....ಸುತ್ತಲೂ ಶತ್ರುಗಳಿಂದ ಸುತ್ತುವರಿಯಲ್ಪಟ್ಟ ಒಂದು ಮಹಾ ಜನಾಂಗ ತನ್ನ ಪ್ರಾಣದ ಮಾನದ ರಕ್ಷಣೆಗಾಗಿ ಪ್ರಜಾಸ್ವಾತಂತ್ರ್ಯವನ್ನು ಮೊಟಕುಮಾಡುವುದರಲ್ಲಿ ತಪ್ಪೇನಿದೆ? ನೂರಾರು ದಶಕಗಳಿಂದಲೂ ಹೇಳ ಹೆಸರಿಲ್ಲದೆ ಇದ್ದ ರಷ್ಯಾದೇಶ ಈಗ ಅಖಂಡ ಕೋಟಿ ಬ್ರಹ್ಮಾಂಡದಲ್ಲೆಲ್ಲಾ ತನ್ನ ಕೀರ್ತಿ ಪತಾಕೆಯನ್ನು ಹಾರಾಡಿಸಬಲ್ಲ ಬೃಹದ್ರಾಷ್ಟ್ರವಾಗಿ ಮಾರ್ಪಟ್ಟಿರುವುದೇ ದೇಶನಾಯಕರ ಶಕ್ತಿಸಾಮರ್ಥ್ಯಗಳಿಗೆ ಸಾಕ್ಷಿ" ಎಂದು ಅವರ ತಾಳಕ್ಕೆ ಸರಿಯಾಗಿ ಹಾಡಿದೆ.

ಆಗ ಅವರು ನನ್ನ ಕಡೆ ಬಿಟ್ಟ ಕಣ್ಣು ಬಿಟ್ಟಹಾಗೆಯೇ ದುರುಗುಟ್ಟುತ್ತಾ "ಚಲ್ರೀ! ನೀವು ರಷ್ಯಾವಿರೋಧವಾಗಿ ಮಾತನಾಡುತ್ತಿದ್ದೀರಲ್ಲಾ, ಎರಡು ನಿಮಿಷಕ್ಕೆ ಮುಂಚೆ....ನೋಡಿ, ರಷ್ಯಾವನ್ನು ಕುರಿತು ಅನೇಕ ಪಾಶ್ಚಾತ್ಯರು........" ಎಂದು ಪ್ರಾರಂಭಿಸಿದರು.

ನಾನೂ ನನ್ನ ಹಾಡನ್ನು ಬದಲಾಯಿಸಿದೆ. "ಅವರೆಲ್ಲರಿಗೂ ಅಸೂಯೆ, ಸಾರ್. ಅಸೂಯೆಗಿಂತ ಭಯ, ಎಂದರೂ ತಪ್ಪಿಲ್ಲ. ಎಲ್ಲೋ ಯಾವುದೋ ಒಂದು

ಸುಳ್ಳುವದಂತಿಯನ್ನು ಕೇಳಿದ ತಕ್ಷಣ, ಅವರು ಅದನ್ನೆ ದೊಡ್ಡ ಹಿಮವತ್ಪರ್ವತ ಮಾಡಿ, ತಮ್ಮ ಪತ್ರಿಕೆಗಳಲ್ಲಿ ಪ್ರಕಟಿಸಿ, ರೇಡಿಯೋಗಳಲ್ಲಿ ಅರಚಿ........" ಎಂದು ಪ್ರಾರಂಭಿಸಿದೆ.

ಅವರಿಗೆ ನನ್ನ ರಾಗ ರುಚಿಸಲಿಲ್ಲ ..."ಹಾಗಲ್ಲ, ನಾನು ಹೇಳುತ್ತಿದ್ದುದನ್ನು ಪೂರ್ತ ಕೇಳಿ....ರಷ್ಯಾವನ್ನು ಕುರಿತು ಅನೇಕ ಪಾಶ್ಚಾತ್ಯರು ಒಳ್ಳೆಯ ಅಭಿಪ್ರಾಯ ಪಡೆದಿದಾರೆ, ಅವರ ಗ್ರಂಥಗಳನ್ನೋದಿದರೆ........"

"ಆಗ ತಿಳಿಯುತ್ತದೆ ಅಲ್ಲಿ ನಿಜವಾದ ಪ್ರಜಾಪ್ರಭುತ್ವ, ವ್ಯಕ್ತಿ ಸ್ವಾತಂತ್ರ್ಯ, ವಾಕ್ ಸ್ವಾತಂತ್ರ್ಯ, ದುಡಿಮೆ ಸ್ವಾತಂತ್ರ್ಯ, ಪೂಜಾಸ್ವಾತಂತ್ರ್ಯ ಎಲ್ಲವೂ ಇವೆ, ಎಂಬುದು" ಎಂದು ನಾನೂ ನನ್ನ ನಿಲುವನ್ನು ಬದಲಾಯಿಸಿ, ಪೂಂಗಿ ಊದಿದೆ. ಆದರೆ, ಹಾವು ಹೆಡೆಯಾಡಿಸಲಿಲ್ಲ. "ಅವು ಯಾವುದೂ ಅಲ್ಲಿಲ್ಲ ಅಂತ ತಿಳಿಯುತ್ತದೆ" ಎಂದರು ಅವರು, ಕೊಂಚ ಕೋಪದಿಂದ.

"ಅದನ್ನೇ ಸಾರ್ ನಾನೂ ಹೇಳುತ್ತಿದ್ದದ್ದು... ರಷ್ಯಾದವರ ಹಣಕ್ಕಾಗಿ ಎಡಗೈ ನೀಡುವ ಹಲಕೆಲವು, ನಾನು ಈಗ ಸೂಚಿಸಿದ ಪಾಶ್ಚಾತ್ಯ ಬರಹಗಾರರನ್ನು ಬಿಟ್ಟರೆ, ಉಳಿದ ಪ್ರತಿಭಾವಂತ ಸಾಹಿತಿಗಳೆಲ್ಲರೂ, ಏಕ ಕಂಠದಿಂದ ರಷ್ಯಾವನ್ನು ಖಂಡಿಸುತ್ತಿದಾರೆ" ಎಂದೆ.

"ಖಂಡನೆ ಮಾಡುವುದು ಸುಲಭ....ಯಾವ ಕ್ರಾಂತಿಯೂ ಕೂಡ, ರಕ್ತಪಾತ ವಿಲ್ಲದೆ ನಡೆದಿಲ್ಲ, ಜಗತ್ತಿನಲ್ಲಿ" ಎಂದು ಅವರು ರಷ್ಯಾಪಕ್ಷವನ್ನೇ ವಹಿಸಿ ಮಾತನಾಡ ತೊಡಗಿದರು.

ನಾನೂ ಅದಕ್ಕೆ ದನಿಗೂಡಿಸಿದೆ. "ಕ್ರಾಂತಿಯ ಪರಿಚಯವೇ ಇಲ್ಲದ ಪಾಶ್ಚಾತ್ಯ ರಾಷ್ಟ್ರಗಳ ಈಗಿನ ವಿದ್ವಾಂಸರಿಗೆ ಅದು ಹೇಗೆ ಗೊತ್ತಾಗಬೇಕು?" ಎಂದು ಹಲ್ಲು ಕಿರಿದೆ.

"ಆದರೆ, ರಷ್ಯಾ ಪರ್ಯಟನ ಮಾಡಿದವರೆಲ್ಲ ರಕ್ತಪಾತದ ನಿದರ್ಶನ ಕೊಡುತ್ತಿದಾರಲ್ಲಾ" ಅಂದರು. "ಈಗಲೂ ಕೂಡ, ಜನರಿಗೆ...." ಎಂದು ಮುಂದುವರಿಸಿದರು.

"ಈಗಲೂ ಕೂಡ ಜನರಿಗೆ ಅತ್ಯಧಿಕಪ್ರಮಾಣದಲ್ಲಿ ಹಿಂಸೆ ಆಗುತ್ತಲೇ ಇದೆ ಯಂತೆ" ಎಂದು ನಾನೂ ಸೊಪ್ಪು ಹಾಕಿದೆ.

"ಅಂತ ಮಾತಿಗೆ ಕಿವಿಗೊಡಬಾರದು. ನಿಜವಾಗಿಯೂ, ಅಲ್ಲಿ ಜನ ಸುಖ ಸಂತೋಷಗಳಿಂದ...." ಎಂದು ಅವರು ರಷ್ಯನರ ಪರವಾದಿಸಲು ಪ್ರಾರಂಭಿಸಿದರು.

ನಾನೂ 'ಪರ' ಆದೆ. "ಸುಖ ಸಂತೋಷಗಳಿಂದ ಬಾಳಿ ಬದುಕುತ್ತಿದಾರೆ" ಎಂದು ಒತ್ತಿ ಹೇಳಿದೆ.


"ಇಲ್ಲ, ಇಲ್ಲ, ಸುಖಸಂತೋಷಗಳಿಂದ ದೂರವಾಗಿದ್ದಾರೆ; ಎಂಬುದೇ ನನ್ನ ಅಭಿಪ್ರಾಯ" ಎಂದು ಅವರು ನಿಲುವನ್ನು ಬದಲಾಯಿಸಿದರು.

"ವಾಸ್ತವಸ್ಥಿತಿ, ನೀವು ಹೇಳುವ ಹಾಗೆಯೇ, ಅತಿಭಯಂಕರ" ಎಂದೆ, ನಾನೂ,

ಆಗ ಅವರು ಎದ್ದರು. "ನೋಡಿ, ಹೀಗೆ ಕ್ಷಣಕ್ಷಣಕ್ಕೂ ಅಭಿಪ್ರಾಯಗಳನ್ನು ಬದಲಾಯಿಸಿ, ಯಾರು ಏನು ಹೇಳಿದರೂ ಅಸ್ತು ಎನ್ನುವ ನಿಮ್ಮಂತಹ ಹೇಡಿಗಳನ್ನು ಕಂಡರೆ, ನನಗೆ ಅಸಹ್ಯ ಹುಟ್ಟುವುದು........ಹೋಗಿಬನ್ನಿ" ಎಂದರು.

"ನನಗೂ ಹಾಗೆಯೇ" ಎಂದು ಹೇಳಿ, ಎದ್ದು ಬಂದೆ.

—ಕಾಮತ್.



"ನಂಗೆ ನಿಂಗಿಂತ ಹೆಚ್ಚು ಪೆಟ್ಟಾಗಿದೆ—ಗೊತ್ತಾ!"

ಹೊಡೆಯಿರೋ

ಹಿಡಿಯಿರೋ, ಹಿಡಿದವನ ಹಿಂಜುಟ್ಟ
ನೆಳೆತಂದು, ತೆಗೆದು ಎಡಗಾಲಿನೆಕ್ಕಡವ
ಕೈಯಲಿ ಹಿಡಿದು ಹೊಡೆಯಿರೋ ... ...
ಡಿಗ್ರಿಹೋಲ್ಡರು ಭಂಡ ತಿಂಬ ಪಿಂಡಕು ದಂಡ
ಹೊಡೆದರೋ ಅವರೆಲ್ಲ ರ್‍ಯಾಂಕುಗಳ ಪಡೆದರೋ
ಕೆರೆಗಿರೆಯ ಕಟ್ಟಿದರೊ ಹೆಣಗಿಣವ ಕೊಯ್ದರೋ
ದುಡಿವರೋ ಬಹುದುಡ್ಡ ಈ ಮಗನೊ!
ಸೋಂಬೇರಿ, ಪೆಕರು, ಮೂಲೆಗೆ ಕುಳಿತು
ಅಳುವನೋ, ಕಿವಿಹಿಡಿದು ಮೇಲೆಬ್ಬಿ
ಬಾರುಕೋಲನು ತೆಗೆದು ಬಿಗಿಯಿರೋ... .... (೧)

ಕವಿಯಂತೆ! ಮಗ, ಹೊರಗೆ ಹೂಬಿಡಲು
ಕೋಗಿಲೆಯು ಕೂಗಲು ವಸಂತದಲಿ
ಜಗದ ಜನರೆಲ್ಲರೂ ಮುಳುಗಿರುವರೋ ಮಜದಿ
ಪ್ರೇಮದಾಟದ ಮಾಟ, ಮಧುರ ನೇಹದ ಕೂಟ
ಎಲ್ಲರೂ ಕಂಡರೋ, ಕಾಣನೀಕುರಿ! ಒಳಗೆ
ಕುಳಿತು ಕಾಗದ ಹಿಡಿದು ಕೆರೆದನೋ ಕಗ್ಗವನು
ಈ ಮಂಕನೆಳೆತಂದು ಕಳಚಿ ಕಾಲಿನ........
ತೆಗೆದು ಬಡಿಯಿರೋ. (೨)

ಏನಿವಗೆ ಬೇನೆ ಇವ ಬಾಳಬಾರದೆ ಸುಖದಿ
ಏನೇನೋ ಕಾಲ್ಪನಿಕ ಚಿಂತೆಯೇತಕೆ ಶಿರದಿ ?
ಹಲ್ತೆರೆದು ನಗನಿವನು, ಒಣಚಿಂತೆ-ಸೊರಗುವನು
ನಂಬಬೇಡಿರೊ ಅಳಲ ಹೂಳಿರೋ ಒದೆಯೊಳಗೆ
ಆಗ ಸರಿಹೋದೀತು-ಹಿಡಿದಿವನ ನೆಳೆತಂದು
ತೆಗೆದು ಮೂಲೆಯ ಪೊರಕೆ ಮಾಡಿರೋ
ಚಾಮರದ ಸೇವೆಯನು........ (೩)

ನೋಡಬೇಕೇಕವಳ, ಸುಮ್ಮನಿರಬಾರದೇ
ನೋಡಿ ಕೆಲಸವಬಿಟ್ಟು ಮಾಡಲೇಕ್ಕೈಚಿಂತೆ
ಹಲ್ಗಿರಿಯಲೇತಕ್ಕೆ ಮನಸೋಲಬೇಕೇಕೆ ?
ಬೇಡವೋ ಬಿಡು ಎಂದು ಹೇಳಿದರೆ ಕೇಳಿದನೆ
ಆಡಬಾರದ ಮಾತನಾಡಿಬಿಡಲಲವಳುಗಿಯೆ
ಮುಖಕೆ ತಂಬುಲ ಬಡಿಯೆ ಆಗ ಅಳಲೇಕೆ ?
ಬೇಡವೇ ಬೇಡವಳು ಹುಡುಕೊ ಇನ್ನೊಬ್ಬಳನು
ಎಂದರೇತಕೆ ಸಿಟ್ಟು ! ಅಳುವನೋ ಉಸಿರಿಟ್ಟು
ಇದಕೆ ಒಂದೇ ಮಂತ್ರ ! ಕೇಳಿರೋ ಈ ತಂತ್ರ
ಹಿಡಿಯಿರೋ ಹಿಂಜುಟ್ಟ ಹಿಡಿದವನನೆಳೆತಂದು
ಬಡಿಯಿರೋ .. .... (೪)



"ಈ ಸಾರಿ ಬಡ್ಜೆಟ್‌ನಿಂದ ತೊಂದರೆ ಪಡೋರು ಅಂದರೆ ನಮ್ಮಂಥೋರು !"

ಕಾರಿದ್ದವರು

ಮೊಸರನ್ನ ಕಲಿಸ್ತಿರಬೇಕಾದ್ರೇನೆ ಅಂದಳು ಮನೆ ಜಾಣೆ: "ಯಾರೋ ಸರ್ವೆ ಆಫೀಸಿನಲ್ಲಿ ಕೆಲಸಮಾಡ್ತಾರಂತೇ, 'ಹಯವದನರಾಯರಂತೇ' ಗೊತ್ತೇ.... ಏನೂ ಇಲ್ಲ ನಮ್ಮ ಹೊಸಮನೆ ನೋಡುಕ್ಕೆ ಬಂದಿದ್ದರೂ.... ನಿಮ್ಮ ಷರತ್ತುಗಳೆಲ್ಲಾ ಹೇಳಿದೇ ... ಎಲ್ಲದಕ್ಕೂ ಒಪ್ಪಿಕೊಂಡಿದಾಳೆ.... ಅವರಿಗೂ ಮೂರೇ ಮಕ್ಕಳಂತೇ.... ನಾಲ್ಕನೇ ದಕ್ಕೆ ಎದುರು ನೋಡ್ತಿದಾರಂತೇ........ಒಂದನೇ ತಾರೀಖು ಸಂಜೆಯೇ ಬಾಡಿಗೆ ಖರಾರಾಗಿ ತಲಪಿಸ್ತಾರಂತೇ........ ಹುಲುಸು ಕಮ್ಮಿ ಬ್ರಾಹ್ಮಣರಂತೇ... ನೋಡುಕ್ಕೆ ಸಭ್ಯರಂತೆ ಕಂಡರು.... ಸರಳಸ್ವಭಾವದವರೂಂತ ಕಾಣತ್ತೇ.... ಅಲ್ಲ ನೋಡ್ರಿ ಮುಂದಿನ ಮನೇನೆಲ್ಲ ೧೦ ನಿಮಿಷ ನೋಡಿ ಮುಗಿಸಿದರು.... ಆದರೇ ಮನೇ ಹಿಂದೆ ಗ್ಯಾರೇಜಿನ ಅಜಮಾಯಿಷಿಯಲ್ಲಿ ೧ ಗಂಟೆ ಕಳೆದರ್ರಿ. ನನಗದೇ ಆಶ್ಚರ್ಯ ಕಾರಿನ ಗ್ಯಾರೇಜಿನ ಮೇಲೆ ಎಷ್ಟು ಮಮತವರ್ಜೀಂತ! ಕೊನೇಗಂದರು 'ಅಮ್ಮಾ ನೀವು ಬಾಡಿಗೆ ವಿಚಾರ ಈಗ ಎತ್ತಲೇಬೇಡೀ....ದಯವಿಟ್ಟು ಈ ಚೀಟಿ ಕೊಟ್ಟುಡಿ ರಾಯರ ಕೈಲೀ' ಎಂದರು" ....ಎಂತ ಹೇಳಿ ದಾಲವೇಂದ್ರದಿಂದ ಆ ಚೀಟಿ ತೆಗೆದುಕೊಟ್ಟಳು....

ಸರ್ವೆ ಆಫೀಸಿನ ಹಯವದನಾ ಯಾರಯ್ಯ.... ಮನೇ ಬಾಡಿಗೆ ೧೫೬/- ಕೊಡೋಂತ ಖದೀಮ–ಏನು ಅವಂದು ಫೋಂಟಿಯಾಕ್ಕೋ, ನವ ಹಿಂದೂಸ್ಥಾನಿಯೋ ಅಥವ ೧೯೪೪ನೇ ಫೋರ್ಡೋ.... ಎಂತ ತಿಣುಕುತ್ತಿರುವಾಗ್ಗ ಕಾಗದ ಬಿಚ್ಚಿ ಮುಂದೆ ಹಿಡಿದಳು ...೧೫೦/- ಕೊಡುಕ್ಕೆ ಒಪ್ಪಿಕೊಳ್ಳುತಾರೇಂತ ಕಾಣತ್ತೇ ಎಂದು ಹೇಳುತ್ತಾ ....ನನ್ನ ಪಾತಾಳಭೇರಿ ...

ಮಹಾಸ್ವಾಮಿ,

"ನೀವು ಈ ಹಿಂದೇ ಈ ಪೂರ್ತಿ ಮನೆಯನ್ನ ೧೫೦/- ಬಾಡಿಗೇಗೆ ಕೊಟ್ಟದ್ದಿರಂತೆ. ನಿಮ್ಮ ಮನೆ ಈಗಾಗಲೆ ೩-೪ ತಿಂಗಳಿಂದ ಖಾಲಿಯೇ ಇದೇ ಎಂತ ಕೇಳಿ ಬಂದೆ. ನಿಮ್ಮ ಗ್ಯಾರೇಜನ್ನ ಪೂರ್ತಿಯಾಗಿ ಪರೀಕ್ಷಿಸಿದೆ.... ನಾವಿರುವುದು ಗಂಡ ಹೆಂಡಿರು ೩ ಮಕ್ಕಳು ಮಾತ್ರ. ಗ್ಯಾರೇಜು ಮುಂದೆ ಒಂದು ನಲ್ಲಿ ಇಡಿಸಿಕೊಟ್ಟರೇ, ನನ್ನ ಸ್ವಂತ ಖರ್ಚಿನಲ್ಲಿ ಒಳಗೆ ಒಂದು ಬಿದಿರು ದೆಬ್ಬೆ ಪಾರ್ಟೀಷ ಹಾಕಿಕೊಂಡು ಸಂಸಾರ ಸುಖವಾಗಿ ನೀಗಿಸಿಕೊಳ್ತೀನೇ................"

"ಯಾಕೆ ಹಾಗೆ ಮಾಡ್ತಿರೀ ಮುಖ .... ಈಗ ಬಂದಿದ್ರೂಂದನಲ್ಲ ಹಯವದನ ರಾಯರೂಂತ.... ಅವರ ಮುಖವೂ ಹೀಗೆ ಇತ್ತು ಹೆಚ್ಚು ಕಮ್ಮಿ.. ...."

— ಕನಿ.

ಉಡುಗೊರೆ ಹಾವಳಿ

"ಅಂದ್ರೇ! ಇಲ್ನೋಡೀಂದ್ರೇ!........ಓದಿಸ್ಬೇಕು ಏನಾದ್ರೂ ನಾವೂನೂ. ನಾಲಕ್ಕು ವರ್ಷದಿಂದ ನೆರೆಹೊರ್ಕೆ ನಡ್ಸಿ....!"

"ಬಿಡೇ! ಬಳಗವಲ್ಲ, ಬಾಧ್ಯವಲ್ಲ, ನಾವು ಯಾಕೆ ಓದಿಸ್ಬೇಕು? ಅಷ್ಟಕ್ಕೂ ನಾವೇನೂ ಎದುರ್ರಿಗಿಲ್ಲವಲ್ಲ ಸಧ್ಯ ಮದುವೇಗೆ! ಈ ಊರಲ್ಲಿ ಕೂತ್ಕೊಂಡು ಆ ಊರಿಗೆ ಕಳಿಸೋರ್ಯ್ಯಾರು?

"ಚೆನ್ನಾಯ್ತು ಸರಿಯಾಗಿ ನೋಡ್ಲೇ ಇಲ್ವೋ ನೀವು ಲಗ್ನಪತ್ರಿಕೇನ? ಮದುವೆ ಇಪ್ಪತ್ತನೇ ತಾರೀಖು. ಹದಿನೈದಕ್ಕೇ ಹೋಗಿತೀರ್ವಲ್ಲ ಹುಡುಗರಿಗೆ ಸ್ಕೂಲು ಬಾಗಿಲು ತೆಗೆಯೋ ಹೊತ್ತಿಗೆ!"

"ಹಾಗೇ! ಹಣೇಬರಹ!....ಹಾಗಾದ್ರೆ ಬಿಡೋಹಾಗಿಲ್ಲಾನ್ನು?"

"ಬಿಡುಕ್ಕಾಗುತ್ಯೇ ಹೇಳಿ! ನಾಲಕ್ಕು ವರ್ಷದಿಂದ ನೆರೆಹೊರ್ಕೆ ನಿಯತ್ತಿನಿಂದ ನಡಿಸ್ಕೊಂಡು ಬಂದಿದೇವೆ. ಸಾಲ ತಂದದ್ದೆಷ್ಟೋ ಕೊಟ್ಟದ್ದೆಷ್ಟೋ! ಮಾತು ಬಿಟ್ಟದ್ದೆಷ್ಟೋ ಕಟ್ಟದ್ದೆಷ್ಟೋ! ಅವರ ಕರೀಬೇವಿನ ಕೊಂಬೇನ ನಾವು ಬಗ್ಗಿಸಿ ಕೊಯ್ದಿಲ್ವೇ, ನಮ್ಮ ಕಣಿಗಲು ಹೂವನ್ನು ಅವರು ಕಣ್ಣು ತಪ್ಪಿಸಿ ಕದ್ದಿಲ್ವೇ? ನಮ್ಮನೇ ಕಸ ಅವರ ಅಂಗಳಕ್ಕೆ ಸುರಿದಿಲ್ವೇ, ಅವರ್ಮನೇ ಮಕ್ಕಳು ನಮ್ಮನೇ ಮುಂದಕ್ಕೆ ಕಾಗದ ಕಚ್ಚಡ ಒಗೆದಿಲ್ವೇ? . ಅಂದ್ಹಾಗೆ, ನಿಮಗೆ ಚೇಳು ಕುಟುಕಿದಾಗ ರಾತ್ರಿಯೆಲ್ಲ ನಿಮ್ಮೊಂದಿಗೆ ಆತನೂ ಅಳಲಿಲ್ವೇ? ಹಗರಣದ ಹೋರಿ ತಡೀಲಾರದೆ ಆತ ಕೊರಳಿಗೆ ಹಗ್ಗ ತೂರಿಸ್ದಾಗ ಕೆಳಕ್ಕಿಳಿಸಿದೋಳು ನೀವಲ್ಲವೇ?....

"ಬಿಡೇ, ನಾನು ಬಂದು ಬಿಡಿಸಲೀ ಅಂತಾನೇ ನನಗೆ ಕಾಣೋ ಹಾಗೆ ಕಿಟಕೀ ಎದೂರ್ಗೆ ಕೊರಳು ಬಿಗಿದ್ಕೊಂಡಿದ್ದ ಅವ!"

"ಹೇಗಾದ್ರೂ ಆಗ್ಲಿ, ಅಂತೂ ನೆರೇಹೊರೆ ಮಗಳ ಮದ್ವೆ ಮಾಡ್ತೀನಿ ಅಂತ ಮಮತೆಯಿಂದ ಕಾಗದ ಬರೆದಿರುವಾಗ 'ಮುಯ್ಯಿ' ಕೊಡದೇ ತೀರದು!"

"ಸರಿ .. ಏನು ತರಬೇಕೂ ಅಂತಿ ಹಾಗಾದ್ರೆ!"

"ಹೇಳಿ ನೀವೇ ನೋಡೋಣ!"

"ಒಂದು ಕನ್ನಡಿ ಕೊಟ್ಬಿಟ್ರೆ, ಸೊಗಸ್ಾದ್ದು ?"

"ಯಾಕೆ ? ಮುಖದ ತುಂಬ ಇರೋ ಸಿಡುಬಿನ ಕಲೆಗಳ್ನ ಪಾಪ ಮದುವೇ ಸಮಯದಲ್ಲೂ ನೆನಪು ಮಾಡ್ಕೊಡೋಣ ಅಂತ್ಲೇನೋ ?....ಬೆಳ್ಳಿ ಬಟ್ಲ್ನ ಯಾಕೆ ತರಬಾರದು ?"

"ಅಯ್ಯೋ! ನನ್ನ ಬಡ್ಜೆಟ್‌ಗೆ ಬರೋ ಕಿರುಬೆರಳುದ್ದದ ಬಟ್ಲ್ನ 'ಕೂಸು ಹುಟ್ಟೋಕೆ ಮುಂಚೆ ಕುಡಿಯೋ ಕಪ್ಪು ತಂದರು' ಅನ್ನಿಸಿಕೊಳ್ಳತ್ತೆ ಅಷ್ಟೆ!"

"ಹಾಗಾದ್ರೆ ?....ಎಲೆಕ್ಟ್ರಿಕ್ ದೀಪದ ಸ್ಟಾಂಡು....?"

"ಸರಿ! ಎಲೆಕ್ಟ್ರಿಸಿಟೀನೇ ಕಾಣದ ಎಲೇಕ್ಯಾತನಪುರದಲ್ಲಿ ಕೆಲ್ಸ ಹುಡುಗನಿಗೆ! ದೀಪ ಒಂದು ಬೇರೆ ಬೇಕೇ ?"

"ಅದೂ ಬೇಡ ...ಸ್ಟೀಲ್ ಪಾತ್ರೆ ಕೊಟ್ಬಿಡೋಣ ಹಾಯ್ವಾಗಿ.

"ಬೇಡ ಮಹಾರಾಯ್ತೀ. ನನ್ನ ಬಟ್ಟೆ ಹರಿಯೋದೇ ಕಾದಿದ್ದು ಹದ್ದಿನ ಹಾಗೆ ಹಾರಿಸಿ, ಬೀದೀಲಿ ತಿರುಗೋ 'ಹಳೇ ಪಾಗಿನ ಕಂಬೀ, ಎವರಿಸ್ಟೀಲ್ ಪಾತ್ರೆ'ಯೋನಿಗೆ ಕೊಟ್ಟು ಪಾತ್ರೆ ಶೇಖರಿಸೋದನ್ನ ಅವರು ಹಗಲು ಹನ್ನೆರಡು ಘಂಟೇನೂ ನೋಡಿದಾರೆ ಸಧ್ಯ!"

"ಯಾವುದು ಹೇಳಿದ್ರೂ ಏನಾದ್ರೂ ತೆಗೀತೀರಿ, ಹೋಗ್ಲಿ ಉಂಗುರ ತಂದ್ಬಿಡಿ ಕಾಲು ಸವರನ್‌ಗೆ."

"ಬೇಡ ಬೇಡ. ಒಡವೇ ಗಿಡವೇ ಕೊಡಬಾರದು. ನೆಹರೂರವರೇ ಹೇಳ್ಲಿಲ್ವೇ ಮೊನ್ನೆ, 'ನಗಗಳ್ನೆಲ್ಲ ನೀರಿಗ್ಹಾಕಿ' ಅಂತ!"

"ನನ್ನ ಕೈಲಾಗೋದಿಲ್ಲ ಅಂದ್ರೆ ಇನ್ನು ಹೇಳುಕ್ಕೆ. ನೀವೇ ಹೇಳಿ ಏನು ತರ್ತೀರೋ!"

"ಬಾಚಣಿಗೇ ಪೆಟ್ಗೆ ತಂದ್ಬಿಡೋಣ."

"ಅಯ್ಯೋ! ಬಕ್ಕತಲೆ ಅವಳಿಗೀಗಲೇ ಕಣ್ರೀ! ಚೌರೀ ಚಾತುರ್ಯಾನ ಹೀಯಾಳಿಸಿದ್ಹಾಗುತ್ತೆ ಅಷ್ಟೆ!"

"ಲಕ್ಷಣವಾಗಿ ಒಂದು ಷೇವಿಂಗ್ ಸೆಟ್ ಉಡುಗೊರೆ ಕೊಟ್ಬಿಡೋಣ.

"ಥೂ! ಏನು ಅವಲಕ್ಷಣದ ಮಾತ್ರೀ ನಿಮ್ಮದು ?"

"ಹುಡುಗನಿಗೆ ಕಣೇ, ಮದುವೇ ಮಾಡಿಕೊಂಡ್ಮೇಲೆ ಮುಂದಿನ ಹಣೇಬರಹಾನ ಈಗಲೇ ಭವಿಷ್ಯ ತೋರಿಸಿದ್ಹಾಗಾಗುತ್ತೆ!"

"ಅಯ್ಯೋ ಪಾಪ! ಆದಕ್ಕೆ ಬದಲು ಕರೀ ಅಂಚಿನ ಸಂತಾಪಸೂಚಕ ಕಾಗ್ದಾನೇ ಬರೆದ್ಬಿಡಿ—ನಿಮ್ಮಭಿಪ್ರಾಯದಲ್ಲಿ ಮದ್ವೆ ಮಾಡ್ಕೊಳ್ಳೋದು ಅಷ್ಟು ಕಷ್ಟ ಆದರೆ!"

"........ಈ ತಾಪತ್ರಯವೇ ಬೇಡ. ಹೇಗಿದ್ರೂ ನಿಮ್ಮಪ್ಪ ಅನ್ನ ಹಾಕ್ತಿದಾರೆ ತಿಂಗಳಿಂದ. ಇನ್ನೂ ಎಂಟು ದಿನ ಹೆಚ್ಚಾಗಿ ವಕ್ರಿಸಿಬಿಡೋಣ ಇಲ್ಲೇನೇ. ಉಡುಗೊರೆ ಹಾಕ್ಬೇನೂ ತಪ್ಪುತ್ತೆ !"

".... ...ಅಷ್ಟೆ ಬಿಡಿ....ನಾನೂ ನಾಲ್ಕು ದಿನ ಹೆಚ್ಚಾಗಿ ತೌರುಮನೇಲಿ ಇದ್ದ ಹಾಗಾಯ್ತು !"

* * *

"ಬಂದ್ರಾ ಸರಸಮ್ಮನೋರೇ ಊರಿಗೆ?....ಸ್ಕೂಲಿಗೆ ಮಕ್ಕಳಿಗೆ ತಡವಾಗ್ಲಿಲ್ವೆ? ....ಅಂತೂ ಮದ್ವೆ ಹೊತ್ತಿಗೆ ಬಂದ್ರಲ್ಲ!....ಅಂದ್ಹಾಗೆ ನಿಮಗೆ ಗೊತ್ತಿಲ್ವೇ? ನಮ್ಮ ಮಗಳ ಮದ್ವೆ ಮುಂದಿನ ತಿಂಗ್ಳು ಮೂರನೇ ತಾರೀಖಿಗೆ ಮುಂದುವರೀತು, ಯಾವ್ದೋ ಮುದುಕಿ ವರನ ಕಡೇದು 'ಗೊಟಕ್' ಅಂದದ್ರಿಂದ!"

"ಹಾ!!"

—ಸುಸಂಪಜ್ಞ



ಟೋಪಿಯೋರ ಮನೆ ಹತ್ತಿರಾನೇ ಖಾಲಿ ಶೀಶಾ ಅಂತ ಕೂಗ್ತಾನೆ.
ಸಂಪಾದಕರ ಮನೆ ಹತ್ರಾನೇ ಹಳೇ ಪೇಪರ್ ಅಂತಾನೆ !!

ನನ್ನ ಛಟಿ

ಬಂಡೆ ಹಳ್ಳಿಲಿ, ಬಂಡೆ ಹಳ್ಳಿಲಿ, ನಾನು ಜನಿಸಿದ ಹಳ್ಳಿಲಿ
ಹೆಂಡ ಕುಡಿಯದೆ ಇದ್ದರೂ ಕಂಡೆ ನಾಕದ ಸುಖವನು
ಹೆಂಡೆ ನೀರು ಉಗುರು ಬೆಚ್ಚಗೆ, ನುಚ್ಚಿನುಂಡೆಯು ಬಿಸಿಬಿಸಿ
ಬೆಂಡೆ ಬದನೆ ಪಡವಲೆಲ್ಲವು ಬಂಡೆಹಳ್ಳಿಲಿ ಬಹಳಿವೆ.

ಅಲ್ಲಿ ಎಲ್ಲರ ಬಾಯಲೂ ಹಾಡು ತುಂಬಲ ತುಂಬಿವೆ
ಅಲ್ಲಿ ಬಿಸಿಲಲಿ ಕಾವಿದೆ, ಮಳೆಯು ಬಿದ್ದರೆ ತಣಿವಿದೆ
ಅಲ್ಲಿ ಗಂಡಸರೆಲ್ಲ ವೀರರು, ಮೀಸೆ ಮೂತಿಯ ಮುಚ್ಚಿದೆ,
ಅಲ್ಲಿ ಹೆಂಗಸರೆಲ್ಲ ರಂಭೆಯರವರ ಕಣ್ಣಲಿ ಕಿಚ್ಚಿದೆ

ಅಲ್ಲಿ ಎಮ್ಮೆಗಳೆಲ್ಲ ಕೆಸರಲಿ ಕುಳಿತು ಮೊಸರನು ಕೊಡುತಿವೆ
ಅಲ್ಲಿ ಎಂ. ಎ. ಪಾಸು ಮಾಡಿದ ತರುಣರೊಬ್ಬರ ಕಾಣೆನು
ಅಲ್ಲಿ ಹರೆಯದ ಹುಡುಗರೆಲ್ಲರು ಮದುವೆಯಾದವರಾಗಲೆ
ಅಲ್ಲಿ ಮುದುಕರು ಒಲೆಯ ಪಕ್ಕದಿ ಎಲೆಯ ಮುಂದೆಯೆ ಇರುವರು

ಅಲ್ಲಿ ಸೂರ್ಯನು ಮೂಡಲಲ್ಲೇ ಉದಿಸಿ ಬರುವನು ನಿತ್ಯವೂ
ಅಲ್ಲಿ ಆತನು ಪಡುವಲಲ್ಲೇ ಇಳಿವ ದಿನದಿನ, ಸತ್ಯವು
ಅಲ್ಲಿ ಆತಗೆ ದಿನವು ಒಂದೇ ದೃಶ್ಯಮಾಲೆಯು ಕಾಂಬುದು
ಇಲ್ಲ ಅಲ್ಲಿ ಯಾವ ಕೀಟಲೆ ಇಲ್ಲ ಬಹುವಿಧ ಕೋಟಲೆ

ಅಲ್ಲಿ ನಾಯಿಗಳಲ್ಲದಾರೂ ಬೊಗುಳಲಾರರು ಕೋಪದಿ,
ಅಲ್ಲಿ ಪಾಳುಗೋಡೆ ಇಲ್ಲ ಅದರಿಂ ಕತ್ತೆ ಒಂದೂ ನಿಲ್ಲದು
ಅಲ್ಲಿ ಜಗದ ಕಸದ ಬುಟ್ಟಿಯು, ಜನರವಾನರ ಚೇಷ್ಟೆಯ
ನೆಲ್ಲ ತಿಳಿಸಿ ಹೊಟ್ಟೆ ತೊಳೆಸುವ ಪೇಪರೊಂದೂ ಬಾರದು

ಅಲ್ಲಿ ವೈದ್ಯರ ನೆರವೆ ಇಲ್ಲದೆ ಯಮನು ಒಬ್ಬನೇ ಸೆಳೆವನು
ಇಲ್ಲ ರೇಡಿಯೊ, ಇಲ್ಲ ಸಿನಿಮ, ಇಲ್ಲ ಸಿನಿಮಾ ಪೋಸ್ಟರು,

ಇಲ್ಲ ಜಪಾನ್ ತರದ ಕೃಷಿಯು, ಇಲ್ಲ ತಾಮ್ರದ ತಂತಿ ಕಂಬವು,
ಅಲ್ಲಿ ದನಗಳಂಬ ಎನುವುವು, ಕೋಳಿ ಕೂಗೇ ಅಲರಮು

ಅಲ್ಲಿ ಹುಡುಗರು ನುಡಿವ ಕಥೆಗಳು ಹೊಸಲು ದಾಟದ ಕಥೆಗಳು
ಅಲ್ಲಿ ಹುಡುಗಿಯರೆಲ್ಲ ನಗುವುದು, ಹಲ್ಲ ತೋರಿಸಲಲ್ಲವು
ಅಲ್ಲಿ ಮಡದಿಯರಾಸೆಯಿಂದಲೆ ಪತಿಗೆ ಕೂಳನು ಕೊಡುವರು
ಅಲ್ಲಿ ಬಾವಿಯ ನೀರ ತೆಗೆದರೆ ಅದುವೆ ಕಸರತ್ತವರಿಗೆ

ಅಲ್ಲಿ ಚಂದ್ರನ ಹಾಸಕೆ ತಂಪು ಇಂಪುಗಳಧಿಕವು
ಅಲ್ಲಿ ನನ್ನಾ ಬಂಡೆ ಹಳ್ಳಿಲಿ ಕಾವ್ಯತಾನೇ ಬರುವುದು
ಅಲ್ಲಿ ಮುಷ್ಕರ, ಚಪ್ರ, ಗೋಷ್ಠಿಗಳೊಂದು ಇಲ್ಲದೆ ಹಿತಕರ
ಅಲ್ಲಿ ಹುಟ್ಟಿದೆ, ಅಲ್ಲೆ ಹೂಳಲಿ, ನನ್ನ ಕೊಪವನು, ಗೆಳೆಯರು

—ರುದ್ರಪ್ಪ



“ಬೇಗ ಹಾಸಿಗೆ ಟ್ರಂಕು ಕಟ್ಟು—ಯಾರೋ ಅತಿಥಿಗಳು ಬರ್ತಿದಾರೆ!”

ಕಮ್ರುನಿಕಕ್ಕಾಗಿ....

ನಾನು ಹುಟ್ಟಿದ ನಕ್ಷತ್ರ ಫಲವೋ ಅಥವಾ ನಾವು ತಲಕಾಡು ಯಾತ್ರೆಗೆ ಹೊರಟ ಘಳಿಗೆಯ ಫಲವೋ—ನನಗೆ ಗೊತ್ತಿಲ್ಲ--ಎಲ್ಲಿಗೆ ಕಾಲಿಡಲಿ—ಅಥವಾ ನಮ್ಮ ವಾಹನದ ಚಕ್ರಗಳಿಡಲಿ ಅನ್ನಿ!—ನಮಗೆ ಯಾವುದಾದರೊಂದು ವಾದ ಸನ್ನಿವೇಶದಲ್ಲಿ ಸಿಕ್ಕಿಹಾಕಿಕೊಳ್ಳುವುದು ರೂಢಿಯಾಗಿಬಿಟ್ಟಿದೆ. ಒಂದಲ್ಲ ಒಂದು ವಿದ್ಯಾಭ್ಯಾಸ, ಆರೋಗ್ಯ, ಸಮಾಜ ಕಲ್ಯಾಣ, ಸಾಂಸ್ಕೃತಿ, ಸಹಕಾರ, ಹರಿಜನೋದ್ಧಾರ—ಅಂತೂ ಒಂದಲ್ಲ ಒಂದು—ನಮ್ಮ ತಲೆ ಕೆಡಿಸೋಕೆ!

ಜಂಗಲೂರು ಬಿಟ್ಟದ್ದಾಯ್ತು. ಜಂಗಲೂರು ಜೊತೆಯಲ್ಲೇ ಈ ತೆರನಾದ ಪ್ರಯೋಗಗಳನ್ನೂ ಬಿಟ್ಟು ಬಿಟ್ಟು ನೇರವಾಗಿ ಯಾತ್ರೆ ಮುಗಿಸಿಬಿಡೋಣವೆಂದು ಮನಸ್ಸು ಮಾಡಿದೆ. ಮನಸ್ಸು ಮಾಡಿದ್ದೇ ತಡ—ರಾಜ ಚಂದಿ ಇಬ್ಬರಿಗೂ ನನ್ನ ನಿರ್ಧಾರ ಹೇಳಿದೆ. ಅವರಿಬ್ಬರೂ ನನ್ನ ನಿರ್ಧಾರಕ್ಕೆ

"All right!!"

ಅಂತ ಒಪ್ಪು ಮುದ್ರೆ ಒತ್ತಿದರು.

ತಲಕಾಡು ದೂರದಲ್ಲಿ ಮುಸುಕು ಮುಸುಕಾಗಿ ನನ್ನ ಕಣ್ಣಿಗೆ ಕಂಡಿತು. ಆದರೆ—

ನಾವು ಸಿಟ್ಟೂರು ಹೋಟಲಿಗೆ ಹೋಗಬಾರದಾಗಿತ್ತು. ಹೋಗಿದ್ದರೂ ನೇರವಾಗಿ ಅಡುಗೆಯ ಮನೆಗೆ ನುಗ್ಗಿ ಅಲ್ಲೇ ತಿಂಡಿ ಕಾಫಿ ತಿಂದು, ದಂಡ ತೆತ್ತು ಹೊಟ್ಟೆಯಲ್ಲೇ ತೇಗಿಕೊಂಡು ಬಾಯಿ ಮುಚ್ಚಿಕೊಂಡು ಹೊರಗೆ ಬರಬೇಕಾಗಿತ್ತು.

ನಾನಷ್ಟು ಪುಣ್ಯ ಮಾಡಿಲ್ಲ. ರಾಜ ಚಂದಿ ಇಬ್ಬರೂ—ಹೋಟೆಲುಗಳಲ್ಲಿ ಮಧ್ಯದ ಹಾಲಿನಲ್ಲೇ ಕುಳಿತಾರು! ಅವರಿಗೆ ಪ್ರತಿಯೊಂದು ಹೋಟೆಲೂ ಯು. ನೋ. ನೋ ಅಥವಾ ಅಸೆಂಬ್ಲಿಯೇ ಆಗಬೇಕು! ಮೂವರಲ್ಲಿ ಇಬ್ಬರದು ಅಂದರೆ—ಡೆಮಾಕ್ರೆಸಿ! ನಾನು ಒಪ್ಪಲೇಬೇಕು.

ಆದದ್ದಾಯಿತು ಅಂತ ಸಿಟ್ಟೂರು ಹೋಟೆಲಿನಲ್ಲಿ ಆದಷ್ಟೂ ಮೂಲೆಯಲ್ಲಿ ಹೋಗಿ ಕುಳಿತೆ. ನನಗಾಗಿ ಕಾದಿದ್ದ ನೂರ ಐವತ್ತೊಂದು ತಿಗಣೆಗಳು ನನ್ನ

ಮೈಮೇಲೆ ಕುರುಕ್ಷೇತ್ರಕ್ಕೆ ಹವಣಿಸಿಕೊಂಡವು. ಆದರೂ ಸುಮ್ಮನಿದ್ದೆ—ಮೊದಲೇ ಹೇಳಿದ ಹಾಗೆ ನನಗೆ ರಕ್ತದ ಒತ್ತಡ ತುಸ ಏರಿರುವುದರಿಂದ ಇದೂ ಒಂದು Nature's Treatment ಅಂತ ಸುಮ್ಮನಿದ್ದೆ. ಆದರೆ–ಸಿಟ್ಟೋರಿನ Arm-chair Politicians—ತೋಳು ಕುರ್ಚಿ ರಾಜಕಾರಣಿಗಳು—ಬಿಡಬೇಕಲ್ಲ! ಬಂದೇ ಬಂದರು—ನಾನು ರಾಜ ಚಂದಿ ಮುದುರಿಕೊಂಡಿದ್ದ ಸ್ಥಳದ ಪಕ್ಕದಲ್ಲೇ ಕುಳಿತರು. ಆಗಲೂ ಸುಮ್ಮನಿದ್ದೆ. ಅವರು—ಐದು ಐದು ಜನರಿದ್ದರು—ನುಗ್ಗಿದಾಗಲೇ ಅವರ ಮುಖ ಲಕ್ಷಣದಿಂದ ಅವರ ಕಸುಬು ತಿಳಿಯಿತು—ಅವರ ಮುಖದ ಮೇಲೆ ರಾಜಕೀಯ ಖಳೆ ಉಕ್ಕಿ ಬರುತ್ತಿತ್ತು! ನಾನು ಸುಮ್ಮನಿದ್ದೆ. ರಾಜ ಚಂದಿ ಸುಮ್ಮಿದ್ದರೂ—ಅವರ ಕಣ್ಣುಗಳು ಅರಳಿದುವು.

ಸರಿ—ಅವರೆಲ್ಲರೂ ಕುಳಿತು ಮಸಾಲೆಗೆ ಗಾಳ ಎಸೆದು ಮಾತಿಗೆ ಶುರು ಮಾಡಿದರು. ನಾವೂ ಮಸಾಲೆಗೇ ಕಾದಿದ್ದೆವು. ಇನ್ನೇನು, ನಮ್ಮ ದೋಸೆ ಬರುವುದರೊಳಗಾಗಿ "ನಲವತ್ತು ಮಿಟುಕೋಣ" ಅಂತ ತೂಕಡಿಸುಕ್ಕೆ ಶುರು ಮಾಡಿದೆ—ಎಚ್ಚರವಾಯ್ತು. ನಮ್ಮ ಪಕ್ಕದ ಕುರ್ಚಿಗಳಿಂದ "Socialism" "Democracy", "Communism", "N.G.O.—Dammit!"—ಹೀಗೆಲ್ಲಾ ಶಬ್ದಗಳು ಹೊರಬಂದುವು. ನಾನು ನಿಜವಾಗಿ ಎದ್ದು ಕುಳಿತದ್ದು ಯಾರೋ ಒಬ್ಬಾತ "STALIN" ಅಂದಾಗ. ಏಕೋ ಏನೋ ಈ ನಡುವೆ ಆ ಪುಣ್ಯಾತ್ಮನ ಹೆಸರು ಕೇಳಿದರೆ ಎಚ್ಚರವಾಗುತ್ತೆ, ನನಗೆ ಕಿವಿಗಳು ಅರಳಿದುವು. ತಾವಾಗಿ ಈ ರಾಜಕೀಯ ಪಟುಗಳ ಸಂಭಾಷಣೆಯನ್ನು ಕೇಳತೊಡಗಿದುವು.. ....

"ಏನಯ್ಯ Socialism ಅಂದ್ರೆ? ಯಾರಿಗೆ Socialism?"

"ಯಾರಿಗೇಂದ್ರೆ ಏನಯ್ಯ—ನಂಗೂ ನಿಂಗೂ ಈ ಹೋಟೆಲು ಮಾಣೀಗು ಕೂಡ! ನಿಂಗೊತ್ತೇ—ಬೇಕಾದ್ರೆ ಈ ಹೋಟೇಲು ಮಾಣಿ ನಮ್ಮ ಭಾರತದ ರಾಷ್ಟ್ರಾಧ್ಯಕ್ಷನಾಗಬಹುದು?"

"ಅಯ್ಯಾ ಧಾರಾಳವಾಗಿ ಆಗಲಿ—ಆದರೆ ನಮ್ಮ ಮಸಾಲೆ ದೋಸೆ ತಂದು ಬಿಟ್ಟು ಎಲ್ಲಿಗಾದರೂ ಹೋಗಲಿ—(ನಗು)"

"Dammit! ಇದೇನು ಹಾಸ್ಯಾನೇನ್ರಯ್ಯ?—ನಿಮಗೆಲ್ಲೋ ಇನ್ನೂ ಆ Imperialismಏ ರಕ್ತದಲ್ಲಿ ಸೇರಿದ್ದಾಗಿದೆ!"

"Allright ಬಾಬಾ!—ನೋಡು–Socialism ಅಂತ ಈಗ ಕಿಲ್ತಾರ್ ಇದ್ದೀಯಲ್ಲ—ಎಲ್ಲರಿಗೂ equal chance ಅಂತ ಹೊಡಕೊಳ್ತಾ ಇದ್ದೀಯಲ್ಲಾ —ಈಗಿರೋ handicapsನ ಹೇಗೆ balance ಮಾಡ್ತೀ ಮೊದಲು ಹೇಳು!"

"ಏನು handicaps ಹೇಳು ?"

"ನೋಡು—higher officers—moneyನೂ ಇದೆ—ತಾವು ದೊಡ್ಡ ದೊಡ್ಡ ಪಟ್ಟಣಗಳಲ್ಲೇ ಇರ್ತಾರೆ—ಮಕ್ಕಳಿಗೂ ವಿದ್ಯಾಭ್ಯಾಸ ಕಲಿಯೋಕೆ ಅನುಕೂಲಗಳಿವೆ—ಮಕ್ಕಳೂ ಮುಂದಕ್ಕೆ ಓದಿ ಅವರೂ higher officersಏ ಆಗ್ತಾರೆ. But ಬಡನೌಕರರು—ಇರೋದೂ ಹಳ್ಳಿ–ದುಡ್ಡಿಲ್ಲ—ಮಕ್ಕಳು ಜಾಸ್ತಿ–ವಿದ್ಯೆಗೆ ಅನುಕೂಲವಿಲ್ಲ—ಅವರ ಮಕ್ಕಳೂ ವಂಶಪಾರಂಪರ್ಯ ಬಡನೌಕರರಾಗೇ ಬರ್ತಾರಲ್ಲಾ—ಇದಕ್ಕೆ ಏನು ಹೇಳ್ತಿ ?"

"It is all bunkum! ಎಷ್ಟು ಜನ ಬಡತನದಿಂದ ಮುಂದಕ್ಕೆ ಬಂದಿಲ್ಲವಯ್ಯ ?"

"Exceptions Prove the rule I Say! ಅವರಿಗಿರೋ handicapsನಲ್ಲಿ ಹಾಗೆ generalise ಮಾಡೋಕೆ ಆಗುತ್ಯೇ ? ಎಷ್ಟು ಜನ ಬಡ ನೌಕರರ ಮಕ್ಕಳು though intelligent—ವಿದ್ಯೆಗೆ ಅವಕಾಶವಿಲ್ದೆ—ಅವರಿರೋ ಜಾಗದಲ್ಲಿ ಸ್ಕೂಲುಗಳಿಲ್ದೆ—ಸ್ಕೂಲಿರೋ ಜಾಗಕ್ಕೆ ಅವರನ್ನ ಕಳಿಸೋಕೆ ಅಪ್ಪಂದರಿಗೆ ದುಡ್ಡಿಲ್ದೆ—ತಮ್ಮ ಗೋಳು ಹೇಳಿಕೊಳ್ಳೋಕೆ ಕೇಳೋರು ಯಾರೂ ಇಲ್ದೆ—ನಮ್ಮ ಡಾಕ್ಟರು ಹೇಳ್ತಿರ್ತಾರಲ್ಲಾ ಕ್ರಾನಿಕ್—ಕಂಪ್ಲೇಂಟು ಅಂತ—Chronic by heredity!—family traditionನ್ನ—clerk begat clerkoo, ಪ್ರೈಮರೀ ಮೇಷ್ಟ್ರು and of course Peon begat Peonoo! So-all talk of Socialism ...ಏನ್ಹೇಳ್ತಿ ?"

"ಆದರೆ—ನಿನ್ನ ಈ ಟೀಕೆಗಳು they are most unkind I say! ಒಂದು ದೇಶದಲ್ಲಿ ಎಲ್ಲಾ ಕಸುಬಿಗೂ ಜನರಿರ್ಲೇ ಬೇಕಲ್ಲಯ್ಯ!—All can not be masters!"

"ಒಪ್ದೆ! but regular ಆಗಿ rotation ಇರ್ಲಯ್ಯಾ! for change Let a Dewan begat a clerk! (ಕರತಾಡನ)

"ಲೋ–ಸಾಕಯ್ಯಾ ನಿನ್ನ ಮಿಷನ್‌ಸ್ಕೂಲು ಸುವಾರ್ತೆಯ ಭಾಷೆ! ಈಗ ನಾಳೆ ನೀನೇ ನಮ್ಮ ಸರ್ಕಾರಾನ ಕಂಟ್ರೋಲಿಗೆ ತಕೊಂಡ್ರೆ—ಏನು ಕಡೀತಿ ಹೇಳು !"

"Challenge ಕಣೋ—ಹೇಳೋ !

"ಹೌದ್ರೀ—ಹೇಳ್ರೀ! ಹೇಳೇಬಿಡ್ರಿ! ಹೀಗಂದಿದ್ದು ಚಂದಿ—ಪ್ರಶ್ನೆ ತಪ್ಪಿ.

"ಹೇಳ್ಲೀ? I will! ನೋಡು—all deserving Ist class children—ಜಾತಿ, ಕುಲ, ಮತ, ಕಸುಬು, ಅಪ್ಪ-ಮುತ್ತಾತ-ಮಾವ-no matter—if they are poor—they will be educated by the State! ಒಂದೇ ಮಾತ್ನಲ್ಲಿ handicaps—due to money and influence! ಚಟ್ಟಕ್ಕೇರಿಸಬೇಕು. ಆಗ ನೋಡು—Race result! ಸುಮ್ಮನೆ Socialism ಅಂತ ಅರಬ್ಬೀ ಕುದುರೆ ಜೊತೆಗೆ ಜಟ್ಕಾ ಕುದುರೆ ಬಿಟ್ರೆ ಆಗುತ್ಯೇ ಜಟ್ಕಾ ಕುದುರೆ ಅನ್ನೋ Taintಏ ಹೋಗಬೇಕು—I mean........"

"Amen!" ಅಂದೆ ನಾನು.

ನಮ್ಮ ಮಸಾಲೆ ದೋಸೆ ಆರಿ ಹಳಸಿತ್ತು. ಆದರೂ—ಮುಂದೆ ದೋಸೆ ತಂದ ಮಾಣಿ ರಾಷ್ಟ್ರಾಧ್ಯಕ್ಷನೇ ಆಗುವನೋ ಏನೋ ಅನ್ನುವ ಗೌರವದಿಂದ ತುಟಿಪಿಟಿ ಕ್ಕನ್ನದೆ ತಿಂದು ಕಾಫಿ ಕುಡಿದು ಹೊಟ್ಟೆಯಲ್ಲೇ ತೇಗುತ್ತ ಹೋಟಲು ಬಿಟ್ಟೆವು.

—"ಕೇಫ"

ವೈದ್ಯರಲ್ಲಿ ವಿಷನಿಮಿಷಗಳು

"ಶೀತಕ್ಕೇನೂ ಔಷಧಿ ಇಲ್ರೀ-ತಾಳಿ-ಎರಡು ದಿನದಲ್ಲೇ ಅದು ನ್ಯುಮೋನಿಯಾ ಆಗುತ್ತೆ—ಅದಕ್ಕೆ ಬೇಕಾದ್ರೆ ನಾನು ಔಷಧಿ ಕೊಡಬಲ್ಲೆ—ಓಹೋ ಧಾರಾಳವಾಗಿ ಸ್ನಾನ ಮಾಡಿ."

ಹಾದಿಯಲ್ಲಿ ಕೇಳಿಸಿದುದು

"ಏನಯ್ಯ—ಇನ್ನು ಸೀಟುಗಳ ಭೇಟಿ ಶುರುವಾಯ್ತು—ಜೊತೆಗೆ—Politiciansಗೆ Portfolioನೂ change ಆಯ್ತು ಅಲ್ವೇ?"

—"ಕೇಫ"

ಮುಗಿಲುಹಳ್ಳಿಯ ಕಥಕ್

ಮೊದಲು, ನಮ್ಮ ಮೇಳಗೀತೆಯನ್ನು ಓದಿ – ಸಾಧ್ಯವಾದರೆ ಬಾಯಿಪಾಠ ಮಾಡಿ ಗಾನಮಂ ಪಾಡಿರಿ.

ಝಣಝಣರೆನಲು ರುಪಾಯಿ,
ಮನವಿದು,
ಠಣ ಪುಣ ಠಣ ಪುಣರೆಂದು ಕುಣಿಯೆ
ರೂಪಾಯಿಯೆ ಅಧಿಪತಿ
ಹಣ ಹಣ ಹಣ ಹಣ ಹಣ ಹಣ
ಹಣ ಕೀ ಮನುಜ ಸಿಪಾಯಿ.
ಝಣ ಝಣರೆನಲು ರುಪಾಯಿ
ನೀಲಗಗನದಲಿ ಹದ್ದು ಹಾರುವುದು ಗರಿಗೆದರುತ ಮೇಲೆ
ಭೂತಲದಲಿ ಹೆಣವೆದ್ದು ಕುಣಿಯುವುದು
ಹಣದ ಸದ್ದು ತೇಲೆ
ಝಣ ಝಣ ಝಣ ಝಣ ಹಣವು ಕುಣಿಯದಿರೆ
ಕೊನೆಗೊಳ್ಳುವುದು ಕತೆ
ಭಣ ಭಣವಾಗದೆ ಇರಲಿ ಬಾಳು ಹಣ
ಪರಿಹರಿಸಲಿ ನಿಮ್ಮೆಲ್ಲವ್ಯಥೆ
ಝಣ ಝಣ ಝಣ ರೂಪಾಯಿಯ ಸದ್ದಿಗೆ
ಕುಣಿವೆನು ನಾನು ಸಿಪಾಯಿ
ಝಣ ಝಣರೆನಲು ರುಪಾಯಿ.

ಇದೀಗ ಮುಗಿಲಹಳ್ಳಿಯ ಕಥಕ್ ಗೀತೆ. ಸರಳ ಸುಂದರವಾದ ಕಲೆ ನಮ್ಮದು. ಠಾಕುರದಾ, ಶಂಭು ಮಹರಾಜ್, ಗೋಪೀಕೃಷ್ಣ ಬ್ರಿಜಮೋಹನರ ಭವ್ಯ ಸಂಪ್ರದಾಯದ ಹೆಮ್ಮೆ ನಮಗಿಲ್ಲ. ಬೋಲ್, ತುಕಡಾ, ರಾಧಾಕೃಷ್ಣ, ಶಿವತಾಂಡವಗಳು ನಮ್ಮಿಂದ ದೂರ. ಜನತೆಯ ಕಲೆ ನಮ್ಮದು. ಔತ್ತರೇಯ ದಾಕ್ಷಿಣಾತ್ಯ ರಾಗ ತಾಳಗಳ ಜಂಜಡ ನಮಗೆ ದೂರ. ಭಕ್ತಿ, ಭಾವ, ಅಭಿನಯಗಳು ಇಲ್ಲ. ಕತೆಯನ್ನು ಹೇಳಿ ನಾವು ಕುಣಿಯುವುದಿಲ್ಲ. ನಾವು ಕುಣಿದುದೇ ಒಂದು ಕತೆಯಾಗಿದೆ. ಕಿರೀಟ, ಉತ್ತರೀಯ, ಗೆಜ್ಜೆ, ತಬಲಗಳೇಕೆ? ಗಂಡಸರು ಹೆಂಗಸರು ಇಬ್ಬರ ಸಹಕಾರದಿಂದ

ಯಾವುದೋ ಥೇಟರಿನಲ್ಲಿ ಕಂಡವರ ದುಡ್ಡು ಕಸಿಯುವ ಮ್ಯಾನೇಜರುಗಳ ಕಾಟವೇಕೆ? ಬೇಡ. ನಿಸ್ವಾರ್ಥ ಸಂಪ್ರದಾಯ ನಮ್ಮದು. ಏಕಮೇವಾ ದ್ವಿತೀಯವಾದುದು.

ಇಂತಹ ಸಂಪ್ರದಾಯಾಚಾರ್ಯನಾದ, ಚಂಡ ಪ್ರಚಂಡ ನೃತ್ಯಮಾರ್ತಾಂಡನಾದ, ನನ್ನ ಭಾವಚಿತ್ರ, ಬಿರುದು ಬಾವಲಿ ಜೀವನಚರಿತ್ರೆಗಳು ಯಾವ ಪೇಪರಿನಲ್ಲೂ ಬಂದಿಲ್ಲವಲ್ಲ! ಏಕೆ? ಎಂದು ನೀವು ಚಿಂತಿಸಬಹುದು. ಕಳವಳಕ್ಕೆ ಕಾರಣವಿಲ್ಲ. ಏಕೆಂದರೆ ಆದ್ಯರ ಅವಸ್ಥೆ ಯಾವಾಗಲೂ ಇದೇ.

ಭರತನನ್ನೇ ತೆಗೆದುಕೊಳ್ಳಿ. ಭರತನಾಟ್ಯದ ಆದಿಪುರುಷನಾದ ಭರತ ಮುನಿಯು, ಒಂದುದಿನ ಇದ್ದಕ್ಕಿದ್ದಹಾಗೆಯೇ ಗಗನಕ್ಕೆ ಹಾರಿ, ಭೂಮಿಗಿಳಿದು ಕೈ ಕಾಲುಗಳನ್ನು ಚಿತ್ರ ವಿಚಿತ್ರವಾಗಿ ವಕ್ರಾಂಬಕ್ರವಾಗಿ ತಿರುಗಿಸಿದಾಗ, ಅವನ ನೆಟ್ಟ ಗಣ್ಣನ್ನು ನೋಡಿ, ಜನ ಇವನಿಗೆ ಕೇಡುಗಾಲ ಬಂತು ಎಂದು ನಿರ್ಧರಿಸಿದರು. ನನಗೂ ಹಾಗೇ ಆಗಿಡೆ ಎಂದು ನನ್ನ ಮಿತ್ರರು ನಿರ್ಧರಿಸಿದಾರೆ.

ಆದರಿಂದು ಭರತ ಲೋಕವಿಖ್ಯಾತನಾಗಿದ್ದಾನೆ. ಅವನ ನಾಟ್ಯದ ರಾಣಿಯರು ಹದಿನೈದು ದಿನಕ್ಕೊಬ್ಬರಂತೆ ಹುಟ್ಟಿಕೊಳ್ಳುತ್ತಾರೆ.

ನೀವು ಎಂಟಾಣೆ ಕೊಟ್ಟರೆ ಸಾಕು ಈ ನಾಟ್ಯರಾಣಿಯರು ನಿಮಗೆ ಇಷ್ಟಬಂದ ಭಂಗಿಗೆ ಅಂಗಾಂಗಗಳನ್ನು ತಿರುಗಿಸುತ್ತಾರೆ. ಆದರೆ ಭರತನಿಗೆ ಹುಚ್ಚು ಹಿಡಿದಿದೆ ಎಂದು ಅವನ ಕಾಲದವರು ನಿರ್ಧರಿಸಿದ್ದರು. ಹಾಗೇ ನನಗೂ ಆಗಿದೆ ಎಂದೆನ್ನುತ್ತಿದಾರೆ. ಕಾಲ ಕಳೆಯಲಿ ತಡೀರಿ. ಆಗ ನನ್ನ ಸಂಪ್ರದಾಯಕ್ಕೂ ರಾಣಿಯರು ಉದಿಸುತ್ತಾರೆ.

ಆದರೆ ನಾನಿರುವತನಕ ನಮ್ಮ ಸಂಪ್ರದಾಯದಲ್ಲಿ ಸ್ತ್ರೀಯರ ಪ್ರವೇಶ ಆಗಲಾರದು. ನಮ್ಮ ನರ್ತನಗಳಲ್ಲಿ ಸ್ತ್ರೀಯರು ಭಾಗವಹಿಸುವಂತಿಲ್ಲ. ಯಕ್ಷಗಾನಕ್ಕಿಂತ ನಮ್ಮದು ಒಂದು ಹೆಜ್ಜೆಮುಂದೆ. ಎಂದರೆ ನಾನು ಸ್ತ್ರೀದ್ವೇಷಿ ಎಂದು ಭಾವಿಸಬಾರದು. ನಮ್ಮ ಪ್ರದರ್ಶನಗಳಲ್ಲಿ ನರ್ತಕಿಯರ ನರ್ತನವಿಲ್ಲದಿದ್ದರೂ, ನರ್ತಕರ ಹೃದಯರಂಗಗಳಲ್ಲಿ ಅವರು ನರ್ತಿಸಲು ಯಾರ ಅಡ್ಡಿಯೂ ಇಲ್ಲ.

ನಮ್ಮ ಮೂರು ಸುಪ್ರಸಿದ್ಧ ನೃತ್ಯಗಳನ್ನು ವರ್ಣಿಸುತ್ತೇನೆ.

ಮೊದಲನೆಯದು 'ಬೀದಿಯ ಕಾಮಣ್ಣ' ಎಂಬ ನಾಮಧೇಯದಿಂದ ಪ್ರಸಿದ್ಧವಾಗಿದೆ. ಇದು ಬ್ಯಾಲೆಟ್ ನೃತ್ಯವನ್ನು ಹೋಲುತ್ತಿದ್ದರೂ, ಮುಗಿಲುಹಳ್ಳಿಯ ಅಂತಸ್ಸತ್ವದಿಂದ ಪಾಶ್ಚಾತ್ಯನೃತ್ಯಗಳನ್ನು ಧಿಕ್ಕರಿಸುತ್ತಿದೆ. ಇದರ ಕಥೆ ಇಂತಿದೆ.

ಮುಗಿಲುಹಳ್ಳಿಯಲ್ಲಿ ಒಂದು ಕಾನ್ವೆಂಟ್ ಸ್ಕೂಲ್ ಇದೆ. ವಾಯು, ಸೂರ್ಯ, ಚಂದ್ರರೂ ಯಾರನ್ನು ನೋಡುವುದಿಲ್ಲವೋ ಅಂತಹ ಸುರಸುಂದರಿಯರಾದ ತರುಣಿಯರು ಅಲ್ಲಿಗೆ ಹೋಗುತ್ತಾರೆ. ಅವರನ್ನು ಶಾಲೆಗೆ ಕರೆದೊಯ್ಯಲು ಒಂದು ಗಾಡಿಯಿದೆ. ಆದರೆ ಮೊನ್ನೆ ಆ ಗಾಡಿ ಓಡಾಡುತ್ತಿರಲಿಲ್ಲ. ಕಾರಣವಿಷ್ಟೇ – ಕಾನ್ವೆಂಟ್‌ಶಾಲೆಯ ಕಟ್ಟಡದಮೇಲೆ ಒಂದು ಲಿಖಿತವಿದೆ. 'ಅರ್ಚ ಶಿಷ್ಯ ತೋಮಾಸರೇ! ನಮಗಾಗಿ ಬೇಡಿಕೊಳ್ಳಿ' ಈ ಗಾಡಿ ಹೊಡೆಯುವ ನೌಕರ ಲಿಂಗಣ್ಣನು, ಮೊನ್ನೆ ದಿವಸ ಗ್ರಹಚಾರ ಕಡಮೆಯಾಗಿಯೋ, ವಕ್ರಿಸಿಯೋ, ಶಾಲೆಯ ಮುಂದೆ ಕುಳಿತುಕೊಂಡು 'ಇಂಗಳಹಾಳು ಮಹಂತೇಶ! ನೀನೇ ಕಾಪಾಡೋ!' ಎನ್ನಬೇಕೆ? ಅದೂ ಪಕ್ಕದಲ್ಲಿದ್ದವರಿಗೆ ಕೇಳಿಸುವಂತೆ. ಪಕ್ಕದಲ್ಲಿ ನಿಂತಿದ್ದ ಫಾದರ್‌ರವರು ಆ ಕ್ಷಣವೇ ಅವನಿಗೆ ಅಲ್ಟಿಮೇಟಂ ಕೊಟ್ಟರಂತೆ. ಕೊಟ್ಟರೋ, ಬಿಟ್ಟರೋ ಗೊತ್ತಿಲ್ಲ. ಅಂತೂ ಲಿಂಗಣ್ಣ ಗಾಡಿ ಹೊಡೆದುಕೊಂಡು ಮನೆಗೆ ಹೋಗಿಬಿಟ್ಟ. ಶಾಲೆ ಮುಗಿಯಿತು. ಸುರಸುಂದರಿಯರಿಗೆ ಗಾಡಿ ಇರಲಿಲ್ಲ. ಕುಸುಮ ಕೋಮಲೆಯರಾದ ಅವರು, ಮುಗಿಲುಹಳ್ಳಿಯ ಜರಡಿ ರಸ್ತೆಗಳಲ್ಲಿ ನಡೆದುಹೋಗುವುದೆಂತು? ಆಗ ಅವರನ್ನು ಮನೆಗೆ ಕರೆದೊಯ್ಯಲು ಶಾಲೆಯವರು ತೆರೆದ ಗಾಡಿಯನ್ನು ಒದಗಿಸಿದರು. ಮುಗಿಲು ಹಳ್ಳಿಯ ಲಾವಣ್ಯ ಸಾಗರವನ್ನು ಹೊತ್ತ ಆ ಗಾಡಿ ರಸ್ತೆಗೆ ಬಂತು.

ಮುಗಿಲುಹಳ್ಳಿಯಲ್ಲಿ ಈಗ ಎಲೆಕ್ಷನ್ ನಡೆಯುತ್ತಿದೆ. ಕ್ರಾಂತಿಕಾರಿ ಕ್ಯಾಪಿಟಲಿಸ್ಟ್ ಪಂಗಡದ ಉಮೇದುವಾರನ ಘೋಷಣಾ ಪತ್ರ ಆ ಗಾಡಿಯ ನೊಗಕ್ಕೆ ಅಂಟಿಕೊಂಡಿತ್ತು. ಸರಿ! ಅದನ್ನು ನೋಡಿದ ಪಕ್ಷದವರು (ತಿಥಿಯವರು?) ಈ ಗಾಡಿಯ ಬೆಂಬಲ ನಮಗಿದೆ! ನಮಗೇ ಓಟು ಕೊಡಿ! ಎಂದು ಗಾಡಿಯ ಬೆನ್ನು ಹತ್ತಿ ಜಯಘೋಷ ಮಾಡಿದರು. ಈ ಭವ್ಯದೃಶ್ಯವನ್ನು ನೋಡಲು ಸಮಸ್ತ ರಾಜಕೀಯ, ಸಾಮಾಜಿಕ, ಐತಿಹಾಸಿಕ, ಭೌತಿಕ, ರಾಸಾಯನಿಕ, ಸಾಂಸ್ಕೃತಿಕ, ಆರ್ಥಿಕ ಪಕ್ಷಗಳೂ ಮುನ್ನುಗ್ಗಿದವು. ಬೀದಿಯ ಕತ್ತೆಗಳೂ, ಆಕಾಶದ ಗಂಡಭೇರುಂಡಗಳೂ ಜೈ ಎಂದವು. ಜಯಘೋಷ ಮುಗಿತು. ವಿದ್ಯಾರ್ಥಿಗಳು ಆವೇಗವನ್ನು ತಡೆಯಲ ಸಮರ್ಥರಾಗಿ ಮೂರ್ಛೆಗೆ ಸಂದರು. ಈ ಸಾಮೂಹಿಕ ನೃತ್ಯದ ದೃಶ್ಯ ನಮ್ಮ ಸಂಪ್ರದಾಯದ ಒಂದು ಮೈಲಿಗಲ್ಲು.

ಎರಡನೆಯದು 'ಹೈನೂನ್ ನೃತ್ಯ'. ಇದು ಏಕಪಾತ್ರ ನೃತ್ಯ ಅಂದರೆ Solo dance. ನನ್ನ ಆಪ್ತಶಿಷ್ಯ ಹಾಗೂ ಮಿತ್ರನೇ ನರ್ತಕ. ದೇಶ–ಮುಗಿಲಹಳ್ಳಿ ಕಾಲ–ಭಾನುವಾರ ಹತ್ತೂವರೆಯಮೇಲೆ ಹನ್ನೊಂದರ ಒಳಗೆ.

ಭಾನುವಾರ ಬೆಳಿಗ್ಗೆ ಹತ್ತುಗಂಟೆಗೆ ಏಳುತ್ತಾನೆ ಇವ. ಹತ್ತೂವರ ಗಂಟೆಗೆ ಐದುನಿಮಿಷ ಕಡಿಮೆಯಾಗಿರುವ ಹಾಗಾದಾಗ ತಾನಿನ್ನೂ ಷೇವ್ ಮಾಡಿಕೊಂಡಿಲ್ಲ ಎಂಬುದು ನೆನಪಾಗುತ್ತದೆ. ಹತ್ತೂಮೂವತ್ತಕ್ಕೆ ಇನ್ಸ್‌ಟಂಟ್ಯಾಕ್ಸ್ ವಕೀಲರ ಮನೆಗೆ

ಹೋಗಬೇಕಾಗಿರುತ್ತದೆ. ಹತ್ತೂಮೂವತ್ತೈದಕ್ಕೆ ವಿಜಯಕೆಫೆಯ ಅಟ್ಟದಮೇಲೆ ದೋಸೆ ಸೇವಾಕಾರ್ಯಕ್ರಮ ಫಿಕ್ಸ್ ಆಗಿರುತ್ತದೆ. ಹತ್ತೂನಲವತ್ತಕ್ಕೆ ಡಾಕ್ಟರ ದವಾಖಾನೆಗೆ ಹೋಗಿ ಅಜ್ಜಿಗೆ ಔಷಧ ತರಬೇಕು. ಹತ್ತೂನಲವತ್ತೆರಡಕ್ಕೆ ಬೆಂಗಳೂರಿಗೆ ಹೊರಡುವ ಬಸ್ಸಿನಬಳಿ ಸ್ನೇಹಿತನಿಗೆ ಸೆಂಡಾಫ್ ಕೊಡಲು ಹೋಗಬೇಕು—ಬಕ್ಕೇಶ್ವರನ ಆಣೆಗೂ ಬರುತ್ತೇನೆ—ಎಂದು ಮೊದಲೇ ಮಾತು ಕೊಟ್ಟಾಗಿದೆ. ಹತ್ತೂಐವತ್ತೆರಡಕ್ಕೆ ಇವನ ಧೋಬಿ ಬಟ್ಟೆಕೊಡುತ್ತೇನೆ ಎಂದು ಹೇಳಿರುತ್ತಾನೆ. ಹತ್ತೂಐವತ್ತೈದಕ್ಕೆ ಆಫೀಸಿನ ಬಳಿ ಬರದಿದ್ದರೆ ಯರಗುಂಟೆಗೆ ಕಳಿಸುತ್ತೇನೆ ಎಂದು ಸಾಹೇಬರು ಅವನಿಗೆ ಹಿಂದಿನದಿನ ಹೇಳಿದ್ದರು. ಛೇ! ಮರೆತೇ ಹೋಗಿತ್ತು ಅವನಿಗೆ — ಭೂಮ್ಯಾಕಾಶಗಳು ಕಡಿದುಕೊಂಡು ಬೀಳಲಿ, ಹೈಡ್ರೋಜನ ಬಾಂಬು ಸಿಡಿಯಲಿ, ನಾಳೆ ಭಾನುವಾರ ನಿನ್ನನ್ನು ಸಿನಿಮಾಕ್ಕೆ ಕರೆದುಕೊಂಡು ಹೋಗೇ ಹೋಗುತ್ತೇನೆ — ಹತ್ತೂಮುಕ್ಕಾಲು ಗಂಟೆಗೆ ಸಿದ್ಧಳಾಗಿರು ಅಂತ ತನ್ನ ಹಾಲೀ ಮನಃಪ್ರಿಯೆ ಹಾಗೂ ಭಾವೀ ಅರ್ಧಾಂಗಿಗೆ ಅವನು ಕಳೆದ ಏಳು ದಿನಗಳಿಂದಲೂ ಹೇಳುತ್ತಾ ಬಂದಿದಾನೆ. ಮಾಡುವುದೇನು?

'ಪಾಯಲಬಾಜೇ' ಯೊಳಗೆ ಒಂದು ಬೋಲ್ ಬರುತ್ತಲ್ಲ

ತರನನ ನನನನ ನನನನ ಕಿಟಕಿಟ
ದೇಖ ಮುರಲಿಯಾ ಬಾಜೇ

ಹಾಗೆ ಇವನು ವರ್ತಿಸುತ್ತಾನೆ, ನರ್ತಿಸುತ್ತಾನೆ.

ಕೊನೆಯದಾಗಿ ಈ ಕಥಕ್ ಸಂಪ್ರದಾಯದ ಮಾರ್ತಾಂಡನಾದ ನನ್ನ ವಿಶೇಷ ನೃತ್ಯದ ಕಥೆಯನ್ನು ಕೇಳಿರಿ. ನನ್ನ ಜೀವನವೇ ಒಂದು ನರ್ತನ. ನಮ್ಮ ಲಂಡೂ ಬುರ್ಡೆ ಮತ್ತು ಬಿಲ್ಲಿ ಬುರ್ಡೆ ಭಾಯಿಗಳು ನನ್ನ ದಿನಚರಿಯನ್ನು ಹೀಗೆ ವರ್ಣಿಸುತ್ತಾರೆ.

ಸುಭಾಕು ಉಠ್‌ಕು, ಮೂಹ್ ಧೋಕು, ನಾಷ್ಟ ಕರ್‍ಕು, ಸಿಗರೇಟ್ ಪೀಕು, ದುಕಾನ್ಕು ಜಾಕು, ಕಾಂ ಕರ್‍ಕು, ವಾಪಸ್ ಜಾಕು, ಖಾನ ಖಾಕು, ಜರ್‍ರ ಸೋಕು, ಉಠ್ಕು, ವಾಪಸ್ ದುಕಾನ್ಕು ಆಕು, ಟಪ್ಪಾಲ್ ಲಿಖ್ಕು, ಛಬ್ಬಜೇಕು ಟಪಾಲ್ ದಾಲ್ಕು, ಕಾಫಿ ಪೀಕು, ಇದರ ಉಧರ್ ಘೂಂಕು, ಔರ್ ಘರ್‍ಕು ಜಾಕು, ಖಾನ ಖಾಕು, ಸೋಕು, ಫಿರ್ ಉಠ್ಕು............

ಇದು ದಿನವಹಿಯ ನರ್ತನವಾಯ್ತು. ಶನಿವಾರ ಸಂಜೆ ಆರು ಗಂಟೆಯ ಸುಮಾರಿಗೆ ನನ್ನ ವಿಶೇಷ ನರ್ತನ ಕಾರ್ಯಕ್ರಮವಿರುತ್ತದೆ.

ಶನಿವಾರ ನಮ್ಮ ಬಜಾರಿಗೆ ರಜ. ನಮ್ಮ ಅಂಗಡಿಯ ಇತರರಿಗೂ ರಜ. ಆದರೆ ಟಪಾಲುರಾಯನಾದ ನನಗೆ ಆ ದಿನ ಸಜ. ಆ ದಿನ, ನಾನು ನಮ್ಮ

ಅಂಗಡಿಯ ಮ್ಯಾನೇಜರ್, ಕರೆಸ್ಪಾಂಡೆಂಟ್ ಹಾಗೂ ಆಫೀಸ್ ಬಾಯ್. ವಾಚ್‌ಮನ್ ಕೂಡ ಆಗಿರುತ್ತೇನೆ. ಸ್ವಯಂ ರಾಜಾ ಸ್ವಯಂ ಮಂತ್ರೀ ಸ್ವಯಂ ತಳವಾರ ಮೇವಚ—ಬಾಬ್ತು.

ಬೆಳಗಿನಿಂದಾ ಕಷ್ಟಪಟ್ಟು ಐವತ್ತು ಕಾಗದ ಬರೆದು ನಮ್ಮ ಸಾಹುಕಾರರ ಸಹಿ ಹಾಕಿಸಲು ·ಕಾದಿರುತ್ತೇನೆ. ಐದುವರೆ ಗಂಟೆಗೆ ಅವರು ಬರುತ್ತಾರೆ. ಐದೂ ಮುಕ್ಕಾಲರವರೆಗೆ ಪೇಪರ್ ಓದುತ್ತಾ ಕುಳಿತಿರುತ್ತಾರೆ. ನಾನು ಯಮ ಧೈರ್ಯ ತಂದುಕೊಂಡು 'ಟಪಾಲಿಗೆ ಹೊತ್ತಾಯ್ತು ಸಹಿ·ಹಾಕಿರಿ' ಎನ್ನುತ್ತೇನೆ. ಆರುಗಂಟೆಗೆ ಪೋಸ್ಟಾಫೀಸಿನಲ್ಲಿ ಲಾಸ್ಟ್ ಕ್ಲಿಯರೆನ್ಸ್. ಅವರು ಒಂದೆರಡು ಕಾಗದಗಳಿಗೆ ಸಹಿ ಹಾಕುವುದಕ್ಕಿಲ್ಲ. ಹೊರಗಡೆ ಎರಡು ಸಕ್ಕರೆ ಲಾರಿಗಳು ಬಂದು ನಿಲ್ಲುತ್ತವೆ. ಹಮಾಲರಿಲ್ಲ, ಗುಮಾಸ್ತರಿಲ್ಲ. ಡ್ರೈವರ್ 'ಜಲ್ದೀ ಇಳ್ಸಿಕೊಳ್ರೀ' ಎಂದು ಬೊಬ್ಬೆ ಹಾಕುತ್ತಾನೆ. ಸಾಹುಕಾರರು 'ರಾಯ್ರೇ ಇವನು ಏನು ಬಡ್ಕೊಳ್ತಾನ್ರೀ. ನನ್ಗಂತೂ ಅರ್ಥ ಆಗ್ಲಿಲ್ಲ ನೀವಾದ್ರೂ ಕೇಳಿ' ಎನ್ನುತ್ತಾರೆ. ನಾನು ವಿಚಾರಣೆಗೆ ಆರಂಭಿಸುವಷ್ಟರಲ್ಲಿ ಟೆಲಿಗ್ರಾಂ ಬಂತು. ತೊಗ್ರಿಬೇಳೆ ರೇಟು ಚೀಲಕ್ಕೆ ಎಂಟು ರೂಪಾಯಿ ಕಡ್ಮೆ ಆಗಿದೆ ಅಂತ. ಬೆಳಗ್ಗೆ ಇನ್ನೂ ಹತ್ತು ವಾಗೀನಿಗೆ ಆರ್ಡರು ಕೊಟ್ಟಿತ್ತು. ಸಾಹುಕಾರರು ಹೇಳುತ್ತಾರೆ "ಮನೆ ಮುರ್ದುಹೋತಲ್ರೀ, ಹದಿನಾರು ಸಾವಿರ ನೀರಿನ ಪಾಲು. ಈ ನನ್ನ ಮಕ್ಕಳಿಗೆಲ್ಲಾ 'ಆರ್ಡರ್ ಕ್ಯಾನ್ಸಲ್ಡ್' ಅಂತ ತಾರು ಜಡೀರಿ" ಅಂತಾರೆ. ಅಷ್ಟರಲ್ಲಿ ಡ್ರೈವರನ ಮೇಲೆ ಅವನ ಹಿಂದಿದ್ದ ಬೆಲ್ಲದ ಪೆಂಡೆಗಳು ಬಿದ್ದುಬಿಡುತ್ತವೆ. ಸಾಹುಕಾರರು 'ಹೋದ ಕಣ್ರೀ! ಸತ್ತ! ಮೇಲಕ್ಕೆತ್ರೀ ಅವನ್ನ ಮೊದಲು' ಅಂತ ಆರ್ಡರು ಮಾಡುತ್ತಾರೆ. ಅಷ್ಟರಲ್ಲಿ ಟೆಲಿಫೋನು ಬಡಿದು ಕೊಳ್ಳಲು ಆರಂಭ. ಅವರು ಫೋನ್ ರಿಸೀವರನ್ನು ಮೇಲೆತ್ತಿ ಕೇಳಿದರೆ, ಕಲ್ಕತ್ತಾದ ಬೆಕ್ಲಿ ಯೋಡ್ ಕಂಪನಿ ಮ್ಯಾನೇಜರು ಇಂಗ್ಲಿಷಿನಲ್ಲಿ ಮಾತಾಡುತ್ತಿದಾನೆ. 'ಏನ್ರೀ ಇವನ ಪಿಂಡ. ಏನೋ ಪಿಸ್ ಟಿಸ್ ಅಂತಾನೆ. ತಕ್ಷಣ ಕೇಳ್ರೀ ಅದೇನು' ಅಂತ ರಿಸೀವರು ಕೈಗೆ ಕೊಡುತ್ತಾರೆ. ಆಗ ಇದ್ದಕ್ಕಿದ್ದ ಹಾಗೆಯೇ ಬೀದಿಯ ಕೊನೆಯಲ್ಲಿ ನಮ್ಮ ಅಂಗಡಿ ಗುಮಾಸ್ತ ಒಬ್ಬನು (ಬೆಳಗಿನಿಂದ ಅಂಗಡಿಗೆ ಬಂದಿಲ್ಲ ಆ ಪಾಪಿ!) ಕಾಣಿಸುತ್ತಾನೆ. ಅವರು 'ರಾಯ್ರೇ ಆಸೋಡೆ ಅಲ್ಲಿ ಹೋಗ್ತಾ ಇದೆ ಶುದ್ಧ ಕಳ್ಳ. ಮೊದಲು ಅವನನ್ನ ಹಿಡಕೊಂಡು ಬರ್‍ರಿ' ಸೈಕಲ್ಲ ಮೇಲೆ ಹೋಗ್ರೀ. ಸೈಕಲ್ ಇಲ್ಲವೇ ಒಂದು ಹೊಸ ಸೈಕಲ್ ಕೊಂಡ್ಕೊಂಡು ಬರ್‍ರೀ' ಅಂತಾರೆ. ನಾನು ತತ್ತರಿಸುತ್ತ, ಅರ್ಜುನನಂತೆ ಕಿಂಕರ್ತವ್ಯ ವಿಮೂಢನಾಗಿ ನರ್ತಿಸುತ್ತೇನೆ. ಅವರ ಪ್ರಶ್ನೆಗೆ ಮತ್ತೆ ಆರಂಭ 'ಸಕ್ರೆ ಇಳ್ಸಿದ್ದಾತೇನ್ರಿ? ತೊಗ್ರಿಬೇಳೆ ಆರ್ಡರ್ ಕ್ಯಾನ್ಸಲ್ ಆತೇ? ಡ್ರೈವರ್ ಸತ್ತನೋ ಉಳಿದನೋ? ಕಲ್ಕತ್ತ ಕಾಲಿಗೆ ಉತ್ತರ ಏನು ಹೇಳಿದ್ರಿ? ಆ ಕಳ್ಳನನ್ನು ಹಿಡ್ಕೊಂಡು ಬಂದಿರಾ? ಅರೇರೇ!! ಮತ್ತೇ

ಬಿಟ್ಟಿ! ಇವೊತ್ತು ಇನ್ಕಂಟಾಕ್ಸ್ ಕಟ್ಟಲು ಡ್ಯೂಡೇಟು. ತಪ್ಪಿದರೆ ಪೆನಾಲ್ಟಿ ಸಾವಿರ ರೂಪಾಯಿ. ಆರುಗಂಟೆಯೊಳಗೆ ಹೋಗಿ ಚೆಕ್ ಕೊಟ್ಟು ಬರ್ರಿ ಆಫಿಸ್ನಲ್ಲಿ."

ಆರು ಗಂಟೆ ಬಡಿಯುತ್ತದೆ. ಅವರು ಹೇಳಿದ ಕೆಲಸ ಯಾವುದೂ ಆಗಿಲ್ಲ. ಉದ್ವೇಗ ಭರದಲ್ಲಿ ಎದ್ದು ನಿಂತು, ಅವರು ಕೆಳಗಿದ್ದ ರಾಗಿಯ ಮೇಲೆ ಜಾರಿ ಬಂದು ನನಗೆ ಡಿಕ್ಕಿ ಹೊಡೆಯಲು ನಾನು ಎರಡು ಮೂರು ಹಿಂಲಾಗ ಹೊಡೆದು ಗಡಿಯಾರದ ಕೆಳಗೆ ಬಿದ್ದು 'ಪೋಸ್ಟ್‌ಗೆ ಹೊತ್ತಾಯ್ತು' ಎನ್ನುತ್ತೇನೆ.

ಎಸೆಯುವ ಲಾರಿಯು ಢ್ರೃಢ್ರೃಗೊಢ್ರೃಕ್ಕೆನೆ
ಮಿಸುಗುವ ಟೆಲಿಫೋನು ಟ್ರಿಂಟ್ರಿಂಟ್ರಿಣಿರೆನೆ
ಒಂದು ಕರಂ ರಿಸಿವರ ಪಿಡಿದೆತ್ತಲ್
ಒಂದು ಪದಂ ಬೀದಿಯ ಬಿಡದೊತ್ತಲ್
ಒಂದು ಪದಂ ಗೋಡೌನನು ಸುತ್ತಲ್
ಗಲ್ಲಿಯ ಕೊನೆಗೆ ಗುಮಾಸ್ತನು ಗುದ್ದಿರೆ
ಬೆಲ್ಲದ ಕೆಳಗಡೆ ಡ್ರೈವರು ಬಿದ್ದಿರೆ
ಆಡುವ ನಾಡುವನಾ ಹಾ ಸೇತು
ಆಡುವನಾ ಬಾಸಿನ ಮುಂದೋತು.

ಈ ಶಿವಭೃತ್ಯ ತಾಂಡವವನ್ನು ಕಂಡು ಶಿವನೂ ನಾಚಿದನೆಂದು ವದಂತಿ.

ಎಳೆಸಿನಲ್ಲಿರುವ ಈ ಕಥಕ್ ಸಂಪ್ರದಾಯದ ಮೂರು ನೃತ್ಯಗಳ ಕಥೆಯನ್ನು ಕೇಳಿ ನಿಮಗೆ ತೃಪ್ತಿಯಾಗಿರಲಿಕ್ಕೆ ಸಾಕು.

ಈ ಎಳೆಗರುವನ್ನು ಎತ್ತಾಗಿಸಲು (ಕತ್ತೆಯಾಗಿಸಲು) ಯತ್ನಿಸುತ್ತಿರುವ ನನಗೆ ಮಹನೀಯರ, ಮಹಿಳೆಯರ ಕುಮ್ಮಕ್ ಬೇಕು ಎಂದು ಮತ್ತೆ ಹೇಳಬೇಕಾಗಿಲ್ಲ.

—ಅ. ರಾ. ಸೇ.

ಜಾ ಪಾ ಳಿ

ಎಂಬ ಚಿತ್ರವಿಮರ್ಶೆ

ಈ ಪರಿಯ ಹೊಲಸನಾವ ಚಿತ್ರದಲು ಕಾಣೆ
ಪಾಪೀ ಜನಪ್ರಿಯ ಜಾಪಾಳಿಗಲ್ಲದೆ

ಕಥೆಯ ಸೊಗಸಲಿ ನೋಡೆ ಕಾಕಮ್ಮನೇವಾಸಿ
ಅಭಿನಯದಲಿ ನೋಡೆ, ಅವಲಕ್ಷಣ!
ಒಳಗೆ ನೀತಿಯ ನೋಡೆ ನಾಚುವರು ವಾನರರು
ಉಡಿಗೆ ತೊಡಿಗೆಯ ನೋಡೆ, ಕಣ್ಣ ಬೇನೆ.

ಸಂಗೀತವನು ಕೇಳೆ ಕಿವಿಯ ಟಿಂಪನ ತೂತು
ಫೋಟತ್ವದಲಿ ನೋಡೆ ಕಸದ ಮುಸುರೆ
ಲಾವಣ್ಯದಲಿ ನೋಡೆ ದೊಡ್ಡ ಕುಂಬಳಕಾಯಿ
ಆವ ಧೈರ್ಯದಿ ಜನರು ಒಳನುಗ್ಗಲಿ?

ಪರದೆಯಲಿ ಹಲ್ಕಿರಿವ ಮುದಿಮೂರ್ತಿಗಳ ಸಾಲು
ಹೆಂಡ ಭಂಡರ ತಂಡ ವೃದ್ಧ ಬೇಬಿ
ಗಂಡ ಹೆಂಡಿರ ಜಗಳ, ಎಮ್ಮೆಗಳ ಹಿಮ್ಮೇಳ
ಹೊಲಸು ಚಿತ್ರಗಳಿಗೆಲ್ಲ ಇದುವೆ ರಾಜ.

ರಜೆಗೆ ಬರೆದುಕೊಳ್ಳದೆ ಪಾಕೀಸ್ಥಾನಕ್ಕೆ ವಲಸೆ ಹೋದ ಮೂವರು ಮಹಮ್ಮದೀಯ ಭಾರತದ ಅಧಿಕಾರಿಗಳನ್ನು ಈಗ ಇಲ್ಲಿ ವಜಾಮಾಡಿದ್ದಾರಂತೆ.

* * *

ತಾಳೀ ಬುಲಾಕು ಇದ್ದವರೆಲ್ಲಾ ಮದುವೆಯಾದವರು ಎಂದು ಹೇಳುವಂತಿಲ್ಲ.
—ನಮ್ಮ ನಾಟಕದ ಸುಬ್ಬಣ್ಣನೂ ಹಾಕುತ್ತಾನೆ.

ಒಂದು ಬಹಿರಂಗ ಪತ್ರ

ಸಂಪಾದಕರಿಗೆ

ಸ್ವಾಮಿ, ಸಂಪಾದಕರೇ !

ನಾನು ವೈದ್ಯ ವೃತ್ತಿಯವ. ೧೮ ವರ್ಷ ಸರಕಾರದ ಸೇವೆ ಮಾಡಿದ್ದೇನೆ. ಅಂದರೆ ಸರಕಾರ ಎಲ್ಲೆಲ್ಲಿಗೆ ವರ್ಗ ಮಾಡಿದೆಯೋ ಅಲ್ಲಿಗೆಲ್ಲಾ ಹೋಗಿ ತಿರುಗಿ ವರ್ಗದ ಆಣತಿ ಬರುವ ತನಕ ಕಾದಿದ್ದೇನೆ. ನಾನು ಹೋದ ಕೊಂಪೆಗಳೊಂದೊಂದೂ ಹಿಂದಿದ್ದ ಕೊಂಪೆಯೇ ಸ್ವರ್ಗಸೀಮೆ ಎಂದು ದೃಢಪಡಿಸಿಕೊಟ್ಟಿದೆ. ಹಳ್ಳಿಗೆ ನನ್ನ ಹೆಂಡತಿ ೧೮ ವರ್ಷಗಳ ಹಿಂದೆ ಬಂದಿದ್ದಳು. ಬಂದು ನೋಡಿದಳು ನಾನಿರಬೇಕಾದ ದವಾಖಾನೆ—ಹಾಗೂ ಮನೆಯನ್ನು. "ನಿಮ್ಮ ಜತೆಯಲ್ಲಿ ಮನೇಲಿರುವುದಕ್ಕೆ ನಾನು ಸಿದ್ಧ. ಅದು ನನ್ನ ಪ್ರಾಚೀನ. ಆದರೆ ಈ ಎಮ್ಮೆಕೊಠಡಿಯ ಈ ಅರ್ಥದಲ್ಲಿ ಸಂಸಾರಕ್ಕೆ ನಾನು ಸಿದ್ಧಳಲ್ಲ" ಎಂದು ಹೇಳಿ ತೌರಿಗೆ ಹೋದವಳು ಇನ್ನೂ ನನಗೆ ಭೇಟಿಯಾಗಿಲ್ಲ. ಹಾಗಾಗಿ ಒಬ್ಬಂಟಿಗನಾದುದರಿಂದ ಈ ಹದಿನೆಂಟು ವರ್ಷದಲ್ಲಿ ೨೨ ಹಳ್ಳಿಗಳಿಗೆ ಹೋಗಿ ದವಾಖಾನೆ ಪ್ರಾರಂಭೋತ್ಸವ – ದವಾಖಾನೆ ಬಂದು ಮಾಡೋ ಉತ್ಸವ – ಇವೆರಡನ್ನೂ ಸಾಂಗವಾಗಿ ನೆರವೇರಿಸುತ್ತ ಇದ್ದೇನೆ. ರೋಗಿಯ ಮುಖ ನೋಡಿ ೧೮ ವರ್ಷಗಳಾಯ್ತು, ೨–೩ ವರ್ಷಕ್ಕೊಮ್ಮೆ ಅದೇ ಮುಖದ ಕಳೆ ಇರುವ ನಮ್ಮ ಆಫೀಸರು ಬಂದು ಕಾರಿನಲ್ಲಿ ಕೂತೇ ತನಿಖೆ ಮಾಡಿ ಮುಂದಕ್ಕೆ ಸಾಗುತ್ತಾರೆ.

ಆದರೆ ಈಗ ನಾನು ಬಂದಿರುವ ಕೊಂಪೆಯು ಅಸಾಧ್ಯ. ಬಂದು ಮೂರು ತಿಂಗಳಾಯ್ತು. ನೂರು ಅರ್ಜಿಗಳನ್ನು ನಮ್ಮ ದೊಡ್ಡ ಸಾಹೇಬರಿಗೂ, ಐವತ್ತನ್ನು ನಮ್ಮ ಇಲಾಖಾಧಿಕಾರಿಗಳಿಗೂ, ಹದಿನೈದನ್ನು ಮಾನ್ಯ ಸಚಿವರಿಗೂ ಗುಜರಾಯಿಸಿದ್ದೇನೆ. ಈ ತಹಲ್‌ವರೆಗೂ ಅವರಿಂದ ಒಂದು ಪತ್ರವಾಗಲೀ, ಹ್ಞು, ಉಹ್ಞು ಆಗಲಿ ಬಂದಿಲ್ಲ. ಮೂರು ತಿಂಗಳಿಂದ ನನಗೆ ಸಂಬಳ ಬಂದಿಲ್ಲ. ಅದು ಬಂದಿದ್ದರೂ ಖರ್ಚು ಮಾಡುವ ಅನುಕೂಲವಿಲ್ಲದ್ದರಿಂದ ಅದರ ತ್ರಾಸು ನನಗೆ ಆಗಿಲ್ಲ. ಊರ ತಳವಾರ ದಿನಕ್ಕೆ ಒಂದು ಬಿಂದಿಗೆ ನೀರು ಕೊಡುತ್ತಾನೆ. ಅದರಲ್ಲಿ ನನ್ನ ಹೊಟ್ಟೆ ಹೊರೆದುಕೊಳ್ಳುತ್ತಿದ್ದೇನೆ. ಆಜೂಬಾಜೂ ಹಳ್ಳಿಯವರು ಹಾರವರು ವಾರಕ್ಕೊಮ್ಮೆ ಅಥವಾ ಎರಡು ಸಾರಿ ಬ್ರಾಹ್ಮಣಾರ್ಥಕ್ಕೆ ನನ್ನನ್ನು ಕರೆಯುತ್ತಾರೆ. ವಾರದ ಊಟ ಅಲ್ಲಿ ಮುಗಿಸುತ್ತೇನೆ. ಅದಕ್ಕೇ ಬಿಂದಿಗೆ ನೀರಿಂದ ಹೊಟ್ಟೆ ತುಂಬಿಕೊಳ್ಳುತ್ತೇನೆ ಎಂದಿದ್ದು.

ನಾನು ಮಲಗುವ ಹಜಾರದ ಬಲಗಡೆ ತುದಿಯಲ್ಲಿ ಊರಗೌಡ ದನ ಕಟ್ಟಿತ್ತಾನೆ. ಎಡಗಡೆ ಊರ ಪಟೇಲ ಕುರಿಮಂದೆ ಬಿಡುತ್ತಾನೆ. ಊರ ಸುತ್ತಲೂ ಚಿರತೆ ಕಾಟ. ನೀವು ಕಾವಲಾಗಿರುತ್ತೀರಿ. ಹೇಗೂ ಇಲ್ಲಿಗೆ ಯಾವ ರೋಗಿಗಳೂ ಬರುಲ್ಲ ಎಂದು ನನಗೆ ಅವರು ಹುಕುಂ ಮಾಡಿದ್ದಾರೆ. ಈ ಸುದ್ದಿ ತಿಳಿದ ಮೇಲೆ ದನಗಳಂತೆಯೇ ನಾನೂ ಇದ್ದಲ್ಲಿಯೇ ಹಗಲಾಗುವವರೆಗೂ ಹೆದರಿ ಬಿದ್ದಿರುತ್ತೇನೆ.

ನಿದ್ರೆ ಬರುಲ್ಲ. ಹಚ್ಚಡ ಹಚ್ಚಿ ಕೂತುಕೊಂಡಿರುತ್ತೇನೆ. ಹೀಗಾಗಿ ದನಗಳು ರಾತ್ರಿ ವೇಳೆ ಹೇಗೆ ಹೇಗೆ ಜೀವನ ನಡೆಸುತ್ತೆ, ಯಾವ ರೀತಿ ನರಳುತ್ತೆ, ಯಾವ ತರಹ ಕೆಮ್ಮುತ್ತೆ ಎಲ್ಲವನ್ನೂ ಅನುಭವದಿಂದ ಅರಿತಿದ್ದೇನೆ. ತದ್ರೀತಿ ಕುರಿಗಳ ದೇಹಸ್ಥಿತಿಯ ವಿಚಾರದಲ್ಲೂ ಕೂಲಂಕುಷವಾಗಿ ಅಭ್ಯಾಸ ಮಾಡಿದ್ದೇನೆ. ಯಾವ ರೀತಿ ಅವುಗಳ ಕೊರಳನ್ನು ಹಿಂಡಿದರೆ ಅವಕ್ಕೆ ಜ್ವರ ಬಿಡುತ್ತದೆ. ಹೇಗೆ ಅವುಗಳ ಹೊಟ್ಟೆಯನ್ನು ತಡವಿದರೆ ನಿದ್ರೆ ಮಾಡುತ್ತವೆ. ಯಾವ ಗತಿಯಲ್ಲಿ, ಯಾವ ಪ್ರಾಸದಲ್ಲಿ ಹಳುಳುಳುಳಾಯಿ ಹಾಡಿದರೆ ಕುರಿಮರಿಗಳು ಬಿದ್ದುಕೊಳ್ಳುತ್ತವೆ ಎಲ್ಲವನ್ನೂ ಕಂಡುಹಿಡಿದಿದ್ದೇನೆ.

ಇಷ್ಟೆಲ್ಲಾ ಅನುಭವವನ್ನೂ ಎಲೆಮರೆಯ ಹೂವಿನಂತೆ, ಈ ಹಾಳು ಕೊಂಪೆಯಲ್ಲಿ ವ್ಯರ್ಥಮಾಡುತ್ತಿದ್ದೇನೆ.

ಆದಕ್ಕೇ ಅರ್ಜಿಗಳನ್ನು ಗುಜರಾಯಿಸಿಕೊಂಡೆ. "ಸ್ವಾಮಿಾ ಈ ರೀತಿ ಅನುಭವ ಪಡೆದ ನನ್ನನ್ನು ಪಶುವೈದ್ಯ ಇಲಾಖೆಗೆ ವರ್ಗಾಯಿಸಿ ಬೆಂಗಳೂರಿನ ಹಿರಿಯ ಪಶುವೈದ್ಯ ಶಾಲೆಗೆ ಕಳುಹಿಸಿ. ಅಲ್ಲಿ ದೊಡ್ಡ ದೊಡ್ಡ ಮನುಷ್ಯರ ಪಶುಗಳು ಬರುತ್ತವೆ. ಅವುಗಳಿಗೆ ಸೇವೆ ನಡೆಸಿದರೆ, ಇಲಾಖೆಯೇ ಮುಂದುವರಿಯಬಹುದು" ಎಂದು.

ಆದರೆ ಯಾರೂ ನನ್ನ ಅಹವಾಲನ್ನು ಕೇಳಲಿಲ್ಲ.

ತಮ್ಮ ಅಮೋಘವಾದ ಪತ್ರಿಕೆಯಲ್ಲಿ ಈ ಪತ್ರವನ್ನು ಪ್ರಚುರಪಡಿಸಿದರೆ, ಯಾರಾದರೂ ದೊಡ್ಡಮನುಷ್ಯರ ಕಣ್ಣಿಗೆ ಇದು ಬಿದ್ದರೆ, ಅವರ ಮನೆ ಕುರಿಯೋ, ಕತ್ತೆಯೋ. ನಾಯಿಯೋ, ಖಾಯಿಲೆ ಇದ್ದು ವಾಸಿಯಾಗದೇ ಇದ್ದರೆ ಆಗ ಈ ಕೊಂಪೆಯಿಂದ ನನ್ನ ವಿಮೋಚನೆ ಆಗಬಹುದು.

ಹಾಗಾದಾಗ, ಶಾಪಗ್ರಸ್ತಳಾದ ಅಹಲ್ಯೆಯನ್ನು ಉದ್ಧಾರ ಮಾಡಿದ ಶ್ರೀರಾಮಚಂದ್ರನ ಪುಣ್ಯ ನಿಮಗೂ ದೊರೆಯುತ್ತದೆ.

ನಿಮಗಾದರೂ ನನ್ನ ಮೇಲೆ ದಯೆ ಬರಲಿ ಎಂದು ಭಗವಾನ್ ದತ್ತಾತ್ರೇಯನನ್ನೇ ಪ್ರಾರ್ಥಿಸುತ್ತೇನೆ.

ದನ ಸೇವಾಕಾಂಕ್ಷಿ
ಡಾ|| ಧನಬಾಳಯ್ಯ

ಬಾಲ ಬಾಧೆ

ಹ ಣ ದ ಪಾ ಠ

ಹಸು	**ಸಾಧು**	**ಕಿಸೆ**	**ಖಾಲಿ**
ಕುರಿಯು	**ಮರಿ**	**ತಲೆ**	**ತಗ್ಗಿಸು**

ಹಸುವು ಸಾಧು–ವಾದ ಪ್ರಾಣಿ. ಆದ–ಕಾರಣ ಅದರ ಕಿಸೆಯನ್ನು ಎಲ್ಲರೂ ಹಿಂಡಿ ಖಾಲಿ ಮಾಡು–ತ್ತಾರೆ. ಅಗೋ ನೋಡು! ಅಲ್ಲಿ ಹೋಗು–ವವ ಪ್ರಜೆ– ಇಗೋ ನೋಡು! ಇಲ್ಲಿ ಕಾದಿರು–ವವ ದೇಶ–ಮುಖ. ದೇಶದ ಮೇಲೇ ಇವನ ಮುಖ ಕಂಡೆಯಾ! ಕಿಸೆಗೆ ಕೈಹಾಕಿ–ದ್ದನ್ನು. ಇಲ್ಲವೇ? ಅದೇ ದೇಶ–ಮುಖನ ಜಾದೂ.

ರಂಗಯ್ಯಾ! ಈ ಕುರಿಯ ತುಪ್ಪಟ–ವನ್ನು ನೋಡಿದೆಯಾ? ಏನು ಹುಲು–ಸಾಗಿ ಬೆಳೆದಿದೆ.

ಯಾರು ತಿರು–ಪತಿ ಮಾಡಿದರು ಈ ಕುರಿ–ಯನ್ನು? ತೋಬಾ! ತೋಬಾ! ಹೇಳಬಾರದು. ತುಪ್ಪಟದ ಸ್ವಾಮ್ಯ ದೇಶದ್ದು. ಕಾಶ್ಮೀರ–ದಲ್ಲಿ ಛಳಿ ಹೆಚ್ಚು. ಹಿರೇ–ಕೊಡಿನಲ್ಲಿ ನೀರು ಬಂತು. ತುಪ್ಪಟ ಚಟ್ಟು. ಕುರಿ ನಡು–ಗುತ್ತೆ–ಆದರೂ ನಗುತ್ತೆ. ಅದಕ್ಕೇ ಅದನ್ನು ಕುರಿ ಎನ್ನುವುದು.

ಬಂದ ಭಾವ ರಷ್ಯಾ ದಿಂದ
ಕುರಿ ಮೇಯ್ಸೋಕ್ಕೆ
ಅಂದ ಚೆಂದ ದಿಂದ ನಿಂತ
ಧ್ವಂಸ–ಮಾಡೋ–ಕೆ
ಮಂದ ಹಾಸ ಬೀರಿ ಅವನು
ಚಂಡ ಸುಲಿದ—

ಹೇಳಿ ಬರೆಯಿಸಿ :—

ಕುರಿ ತಲೆ ತಗ್ಗಿಸಿತು—ಅವುಗಳನ್ನು ಮೇಯ್ಸುವವ ಅಲ್ಲಿಂದ ಬಂದ. ಬಲಿತ ಕುರಿ ಬಲು ಚೆನ್ನು ಬಲಿ ಕೊಡಲು—ಹಸುವನ್ನು ಕಂಡರೆ ದೇಶ–ಮುಖಗೆ ಪ್ರೇಮ. ಕಿಸೆ ಖಾಲಿಯಾದರೂ ಖುಷಿ ಇರಬಹುದು.

—ಬಚ್ಚ

ಸಾವಧಾನ

ಊರಾಚಿನ ಮಾರಿಗುಡಿಯ ಮಂಟಪದಲ್ಲಿ ಬೆಳಗಿನ ಝಾವ ಐದು ಗಂಟೆಯ ಹೊತ್ತಿಗೆ ಒಬ್ಬ ಭೈರಾಗಿ ಬೇಗ ಬೇಗ ಎದ್ದು, ಗಡ್ಡ ತೀಡಿ ಕಟ್ಟಿ, ಜಡೆಯನ್ನು ಬಿಗಿದು ಕಟ್ಟಿ ಅದಕ್ಕೆ ಒಂದು "ಬೋ" ಕಟ್ಟಿ, ಲಕ್ಷಣವಾಗಿ ತಿಲಕವಿಟ್ಟು, ಉಡುಪು ಧರಿಸಿ, ತನ್ನ ಡಮರಗವನ್ನು ಎರಡು ಬಾರಿ ಬಾರಿಸಿದ.

ಆಗ ಆ ಶಬ್ದಕ್ಕೆಚ್ಚೆತ್ತ ಅವನ ಅನುಯಾಯಿ ಮೆಲ್ಲನೆದ್ದು, ಸಾವಧಾನವಾಗಿ ಕಣ್ಣುಜ್ಜಿಕೊಂಡು, "ಏನು ಬೈರಣ್ಣ ಏನು ಅವಸರ! ನಿದ್ದೆ ಬಿಟ್ಟಾಗ ಎದ್ದು ಮೆಲ್ಲಗೆ ಹಾಡು ಹಾಡುತ್ತಾ ಮಂಗಳಸ್ನಾನ ಮಾಡಿ, ಸ್ವಲ್ಪ ಛಳಿ ಕಡಿಮೆಯಾದಾಗ ಭಿಕ್ಷಕ್ಕೆ ಹೊರಟರೆ ಜೋಳಿಗೆ ತುಂಬಾ ಭಿಕ್ಷ ಬಿದ್ದಾತು. ಜನರೇಳುವ ಮೊದಲೇ ಎದ್ದು ಬಾಗಿಲು ಸಾರಿಸುವ ಮೊದಲೇ ಮನೆಗೆ ಹೋದರೆ ಮನೆಯಾಕೆಗಾದರೂ ಪುರಸೊತ್ತಿರಲ್ಲ. ಭಿಕ್ಷೆ ತಾನೆ ಹೇಗೆ ಹಾಕಾಳು?" ಎಂದು ಒಂದು ಬೀಡಿ ಹಚ್ಚಿಸಿ, ಕೂತಲ್ಲೇ ಕಾಲ ಮೇಲೆ ಕಂಬಳಿಯನ್ನು ಎಳೆದುಕೊಂಡ.

ಬೈರಣ್ಣನಿಗೆ ಬಲು ಕೋಪ ಬಂತು, "ಏನೆಲೇ! ದಾಸಣ್ಣಾ! ಅನುಭವದ ಗಾದೆ ಕೇಳಿಲ್ಲವೇ? ಮೊದಲೆದ್ದ ಹಕ್ಕಿಗೇ ಮೊದಲ ಹುಳು ಸಿಗುವುದು" ಎಂಬುದನ್ನು ಬೇರೆ ಭಿಕ್ಷುಕರು ಬರುವ ಮೊದಲೇ ನಾವು ಹೋದರೆ ಜೋಳಿಗೆ ಬೇಗ ತುಂಬುತ್ತೆ. ವಿಳಂಬ ಮಾಡಿ ಹೋದರೆ ಜೋಳಿಗೆ ಬರಿದು ಎನ್ನುವುದು ಖಂಡಿತ. ನಾನೇನೋ ಸಿದ್ಧನಾಗಿದೇನೆ. ನೀನು ಉತ್ತರದ ಬಡಾವಣೆಗೆ ನಾನು ದಕ್ಷಿಣದ ಬಡಾವಣೆಗೆ ಎಂದು ಲೆಕ್ಕ ಹಾಕಿದ್ದೆ. ಆದರೆ ನಿನ್ನ ಸಾವಧಾನ ಕಂಡು ಎರಡನ್ನೂ ನಾನು ಮೊದಲು ಮುಗಿಸುತ್ತೇನೆ. ನಂತರ ಬರುವ ನೀನು ಎರಡನ್ನೂ ನಡೆಸಿಕೋ, ಎಂದು ಹೇಳಿದ ಬೈರಣ್ಣ ಡಮರಗವನ್ನು ಮತ್ತೊಮ್ಮೆ ಬಾರಿಸಿ ಹೊರಟು ನಿಂತ.

ದಾಸಣ್ಣ ಬೀಡಿ ತುಂಡು ಬಿಸಾಕಿ, ತಿರುಗಿ ಕಂಬಳಿ ಹೊದ್ದುಕೊಂಡು ಮಲಗಿಬಿಟ್ಟ. ಬೈರಣ್ಣ ಹೊರಟೇ ಬಿಟ್ಟ.

* * *

ಬೈರಾಗಿ ಶಕುನ ನುಡಿಯುತ್ತಾ ಆರು ಗಂಟೆ ಬೆಳಗ್ಗೆಯಲ್ಲೇ ಮಾರಿಗುಡಿಯ ಹತ್ತಿರವಿದ್ದ ದಕ್ಷಿಣದ ಬಡಾವಣೆಯ ಮೊದಲ ಬಂಗಲೆಯ ಗೇಟಿನ ಬಳಿ ನಿಂತ.

ಡಮರುಗವನ್ನು ಬಾರಿಸುತ್ತಾ "ಶುಭವಾಗಲಿ ನಿಮಗೆ! ನಿಮ್ಮ ಮನಸ್ಸಿನಲ್ಲಿದ್ದುದೆಲ್ಲಾ ಆಗಿಹೋಗಲಿ, ಪಕ್ಕದ ಮನೆಯ ಹೆಣ್ಣ ಕಣ್ಣೋಟ ತಾಕದಿರಲಿ, ಬುಡು ಬುಡು ಬುಡುಕ್, ಎಲ್ಲ ಸಂಪತ್ತೂ ನಿಮಗಾಗಲೀ, ಅಕ್ಕದ ಮನೆಯ ಇಕಂಟ್ಯಾಕ್ಸಿನವನ ಕಣ್ಣು ಬೀಳದಿರಲಿ—ಬುಡು ಬುಡು ಬುಡು........"

ಆ ಮನೆಯಾಕೆಯು ಬಚ್ಚಲ ಮನೆಯಲ್ಲಿ ಒಲೆ ಹತ್ತಿಸುತ್ತಿದ್ದಳು. ಆ ನಿಶ್ಶಬ್ದದ ಹೊತ್ತಿನಲ್ಲಿ ಭೈರಾಗಿ ಬೈರಣ್ಣನ ಶಕುನ ಸ್ಪಷ್ಟವಾಗಿ ಕೇಳಿಸುತ್ತಿತ್ತು. "ಪಕ್ಕದ ಮನೆಯ ಹೆಣ್ಣ ಕಣ್ಣೋಟ ತಾಕದಿರಲಿ" ಎಂದ ನುಡಿ ಅವಳಿಗೆ ಆಂದೋಲನ ವನ್ನುಂಟುಮಾಡಿತು. ದಿಟ. ಮೂರು ತಿಂಗಳ ಹಿಂದೆ ಪಕ್ಕದ ಮನೆಗೆ ಬಾಡಿಗೆಗೆ ಬಂದವರು ಶಾಲಾ ಉಪಾಧ್ಯಾಯಿನಿ. ಬೆಡಗು ಬಿನ್ನಾಣವಂತೆ, ಆದರೂ ಗಂಡೆಂಬ ಸಂಕೋಲೆ ಹಾಕಿಕೊಂಡಾಕೆ ಅಲ್ಲ, ತನ್ನ ಜೀವನ ತಾನು ಸುಸೂತ್ರ ನಡೆಸುವ ಶಕ್ತಿ ಹೊಂದಿದಾಕೆ. ಮನೆಯಾಕೆಗೆ ಏನೋ ತಳಮಳ. ಈ ಪ್ರಾರಬ್ಧ ನಮ್ಮ ಬೀದಿಗೆ ಬರಬೇಕೇ? ನಮ್ಮವರ ಬುದ್ಧಿ ಗೊತ್ತೇ ಇದೆ. ಇವರನ್ನು ನೋಡಿಕೊಳ್ಳು ವುದಲ್ಲದೆ, ಇನ್ನು ಮೇಲೆ ಈಕೆಯ ಮೇಲೂ ಕಣ್ಣಿಡುವ ಹಾಗಾಯ್ತೇ ಎಂಬುವ ಯೋಚನೆ. ಬುಡು ಬುಡಿಕೆಯವನು ಹೀಗಂದ ಮೇಲೆ ಇವನಿಗೆ ಏನೋ ಅಮಾನುಷ ಶಕ್ತಿ ಇದೆ, ದೈವ ಒಲಿದಿದೆ ಇವನ ನಾಲಿಗೆಗೆ ಎಂದಂದುಕೊಂಡಳು. ಭವಿಷ್ಯ ಕೇಳಲೇಬೇಕು ಎಂದು ಹಂಬಲ ತೋರಿತು. ಬೀದಿಯ ಬಾಗಿಲಿಗೆ ಹೊರಟಳು. ಹಜಾರದಲ್ಲಿದ್ದ ಗಂಡನ ಸರಿಗೆ ಪಂಚೆಯನ್ನು ಕೈಗೆ ತೆಗೆದುಕೊಂಡಳು. ಹೇಗೂ ಆಕೆಯ ತಂದೆ ಅಳಿಯನಿಗೆ ಕೊಟ್ಟದ್ದು, ತಾನು ಭೈರಾಗಿಗೆ ಕೊಟ್ಟರೆ ತಪ್ಪೇನು ಎನ್ನುವ ಮನೋಧರ್ಮ. ಬೈರಣ್ಣನಿಗೆ ಅದನ್ನು ಕೊಟ್ಟು ಭವಿಷ್ಯ ಹೇಳಪ್ಪಾ, ಈ ಮನೆಯಲ್ಲಿ ನಾನಿರುತ್ತೇನೋ, ಅಥವಾ ಮುಂದಕ್ಕೆ ತೌರೇ ಗತಿಯೋ ಎಂದು ಅಂಗೈ ಚಾಚಿದಳು ಬೈರಣ್ಣನ ಕಣ್ಣಮುಂದೆ.

ಬೈರಣ್ಣನಿಗೆ ಬಲು ಖುಷಿ. ಬೇಗೆದ್ದು ಬಂದಿದ್ದಕ್ಕೆ ಮೊದಲ ಭಿಕ್ಷೆ ಸರಿಗೆ ಪಂಚೆ. ಕಳ್ಳನಿಗೆ ಮಾರಿದರೂ ಎರಡು ರೂಪಾಯಿ ಸಿಗುತ್ತೆ; ಜತೆಗೆ ಜೋಳಿಗೆ ಯನ್ನು ತಂಗಳಿಂದ ತುಂಬಿಸಿಕೊಳ್ಳಬಹುದು. ಈಕೆಯ ಮನಸ್ಸಿಗೆ ಖುಷಿ ಮಾಡುವಂತೆ ಶಕುನ ನುಡಿದರೆ, ಎಂದು ಹೊಂಚು ಯೋಚಿಸಿದ.

ಆಕೆಯ ಅಂಗೈ ರೇಖೆ ನೋಡಿ ಶಕುನ ನುಡಿದ, ಭವಿಷ್ಯ ಹೇಳಿದ.

"ಶುಭವಾಗತ್ತೈತಿ ಅಮ್ಮಾ, ಮಾಂಗಲ್ಯ ರೇಖೆ ಬಿಗಿಯಾಗತ್ತೈತಿ.

ಬಂದ ಬಂಧಾನವೆಲ್ಲಾ ಬಂದ್ಹಂಗೆ ಹರಿದು ಹೋಗ್ತೈತಿ.

ನಿಮ್ಮ ಸುಖರೇಖಿ ಐತಲ್ಲಾ ಅದು ಸ್ವಲ್ಪ ಭಿನ್ನವಾಗ್ತೈತಿ.

ಬಹರಿಂಗೆ, ಭೈರಾಗಿಗಳಿಂಗೆ ಧರ್ಮ ಮಾಡು ತಾಯಿ.

ಅದು ಕಾಪಾಡುತ್ತೈತಿ ನಿಮ್ಮ ಮನೆಯ, ಕಾಪಾಡುತ್ತೈತಿ ನಿಮ್ಮ ಪತಿಯ.

ಆಕೆಗೆ ಇಷ್ಟಕ್ಕೆ ಸಾಕಷ್ಟು ಹಿತವಾಗಲಿಲ್ಲ. ಪಕ್ಕದ ಮನೆಯ 'ಮೇಡಂ' ಕಾಟ ಖಂಡಿತವೋ ಎಂಬ ಸಂದೇಹ. ಶಹಣೆ ತಾನು ಎಂದೆಂಬ ವಿಶ್ವಾಸದಿಂದ ಕೇಳಿದಳು ಭವಿಷ್ಯಕನನ್ನು.

"ಸುಖರೇಖ ಭಿನ್ನವಾಗ್ಯೈತಿ ಎಂದೆಯಲ್ಲಪ್ಪಾ ಭೈರಾಗಿ, ಯಾವ ದಿಕ್ಕಿನಿಂದ ಭಿನ್ನವಾಗಿದೆ ಎಂದು ಕೇಳಿದಳು.

ಪ್ರಪಂಚ ಸುತ್ತುವವ ಭೈರಾಗಿ, ಜನರನ್ನು ನೋಡಿದವ ಭೈರಾಗಿ, ಆತಂಕಗಳನ್ನೇ ಕೇಳಿಕೊಂಡವ ಭೈರಾಗಿ. ಎದುರು ಮನೆ ನೋಡಿದ ಕಿಟಕಿಗೆಲ್ಲಾ ಕಂಬಿಗಳಿದ್ದುವು ಅಷ್ಟೇ. ಎಡಗಡೆ ಮನೆ ನೋಡಿದ ಆ ಮನೆಯ ಕಿಟಕಿಗಳೆಲ್ಲವೂ ಮುಚ್ಚೇ ಇತ್ತು. ಬಲಗಡೆ ಮನೆ ನೋಡಿದ ಕಿಟಕಿಗಳಿಗೆಲ್ಲಾ ಬಣ್ಣ ಬಣ್ಣದ ಪರದೆ ಕಟ್ಟಿತ್ತು. ಪರದೆ ತುದಿಗೆ ಲೇಸ್ ಶೃಂಗಾರ ಇತ್ತು. ಆ ದಿಕ್ಕು ನೈರುತ್ಯ.

"ಶುಭವಾಗತ್ತೈತಿ ಅಮ್ಮಾ, ಹಾಲಕ್ಕಿ ಹೇಳ್ತೈತೆ ತಾಯಿ.

ಬಂಧಾನ ಬರುವುದೂ ಎಲ್ಲಾ ನೈರುತ್ಯದಿಂದಾಲೇ ತಾಯಿ.

ಬಂದ್ಹಾಂಗೆ ಹೋಗತ್ತೈತಿ, ಧರ್ಮವಾ ಕೊಡ್ಬೇಕು ತಾಯಿ.

—ಎಂದು ಹೇಳಿಯೇ ಬಿಟ್ಟ.

ಮನೆಯಾಕೆ ನಿಟ್ಟುಸಿರು ಸುಯ್ದಳು. ನೈರುತ್ಯದ ಕಡೆಗೆ ನೋಡಿ—ಆ ದಿಕ್ಕಿನ ಮನೆಯೇ ಮೇಡಂ ಮನೆ. ಅವಳ ಮನಸ್ಸು ಅದೇ, ಭವಿಷ್ಯದವ ನುಡಿದುದೂ ಅದೇ ಅಂದ ಮೇಲೆ ಅದು ಸತ್ಯ ಎಂದೆನ್ನಿಸಿದುದು ಆಶ್ಚರ್ಯವೇ?

ಮನೆಯ ಒಳಕ್ಕೆ ಹೋದಳು. ಹಿಂದಿನ ರಾತ್ರಿಯ ತಂಗಳೆಲ್ಲವನ್ನೂ ತಂದು ಅವನ ಜೋಳಿಗೆಗೆ ಸುರಿದಳು. ಅಷ್ಟೇ ಅಲ್ಲದೆ ಆ ಬೆಳಿಗ್ಗೆ ಮಾಡಿದ ಕಾಫಿಯನ್ನು ತಂದೂ ಅವನ ಕಮಂಡಲುವಿಗೆ ಹಾಕಿದಳು ದಕ್ಷಿಣೆ ಬೇರೆ, ಆ ಬೆಳಗಿನ ತರಕಾರಿಗೆಂದಿಟ್ಟಿದ್ದ ರೂಪಾಯನ್ನು ಕೊಟ್ಟಳು. ಕೊಟ್ಟು ನಿಟ್ಟುಸಿರಿಟ್ಟಳು—ಭೈರಾಗಿ ತುಂಬು ಜೋಳಿಗೆಯಿಂದ ಹೊರಬಿದ್ದಿದ್ದ.

ಮನೆಯಾತ ಬೆಳಿಗ್ಗೆ ೬ ಗಂಟೆಗೆ ಎದ್ದಿದ್ದ. ನಿದ್ರೆ ಬರಲಿಲ್ಲ. ಹಿಂದಿನ ದಿನ ಕಚೇರಿಯಲ್ಲಿ ಲೆಕ್ಕ ಸರಿದೂಗಿರಲಿಲ್ಲ. ಎಷ್ಟು ಹೊತ್ತು ಹೆಣಗಾಡಿದರೂ ಅರ್ಥವಾಗಿರಲಿಲ್ಲ. ಕಡೆಗೆ ಸಸ್ಪೆನ್ಸ್ ಲೆಕ್ಕಕ್ಕೆ ಮೊಬಲಗನ್ನು ದಾಖಲೆ ಮಾಡಿ ಬಂದಿದ್ದ.

ರಾತ್ರಿಯೆಲ್ಲಾ ಅದೇ ಯೋಚನೆ. ಬೆಳಗಿನ ಝಾವ ಪ್ರಕೃತಿನಿಯಮಕ್ಕೆದ್ದಾಗ ತಕ್ಷಣ ಹೊಳೆಯಿತು "ಓಹೋ! ಜಮಾಕ್ಕೆ ಸೇರಿಸಬೇಕಾದ ೧೩ ರೂಪಾಯಿಯನ್ನು ಖರ್ಚಿನ ಬಾಬ್ತಿಗೆ ಸೇರಿಸಿದೆ. ಅದಕ್ಕೆ ೨೬ ರೂಪಾಯಿ ವ್ಯತ್ಯಾಸ ಎಂದು." ಖುಷಿಯಾಗಿ ಒಂದು ಸಿಗರೇಟ್ ಹೊತ್ತಿಸಿ ಕಿಟಕಿಯ ಬಳಿ ತಂಗಾಳಿ ಬೀಸುವಲ್ಲಿ ಕುಳಿತಿದ್ದ.

ತನ್ನಾಕೆ, ಛೈರಾಗಿ ಸಂಭಾಷಣೆಯನ್ನು ಪೂರ್ತಿ ಕೇಳಿದ್ದ. ನೈರುತ್ಯ ದಿಕ್ಕಿನ ಮನೆಯ ಕಡೆ ಆಗಲೇ ಆತ ನೋಡಿದ್ದು. ಅಲ್ಲಿನ ಕಿಟಕಿಗಳ ಲೇಸಿನ ಪರದೆಯನ್ನು ಕಂಡ. ಕಂಡು ಏನು ಸೊಬಗು ಏನು ಕಲಾತ್ಮಕ ಶೃಂಗಾರ ಎಂದೆಂದುಕೊಂಡ. ಆ ವೇಳೆಗೆ ಆ ಮನೆಯ ಹೊರ ಬಾಗಿಲು ತೆರೆದು ತಿಳಿಬಿಳಿಯ ಸೀರೆಯನ್ನುಟ್ಟ, ಆ ಮನೆಯಾಕೆ ಒಮ್ಮೆ ದೀರ್ಘವಾಗಿ ಉಸಿರೆಳೆದು ಬಿಟ್ಟು, ಇದೇ ರೀತಿ ೨೫ ಬಾರಿ ಮಾಡಿ, ಹಾಗೆ ಮಾಡುವಾಗ ತೋಳೆರಡನ್ನೂ ಎತ್ತಿ ವ್ಯಾಯಾಮ ಮಾಡಿ, ಚಿಗುರೆ ಯಂತೆ ನೆಗೆಯುತ್ತಾ ತಿರುಗಿ ಮನೆ ಸೇರಿದಳು.

ಎಲ! ಎಲಾ!! ಯಾವ ದೇವತೆ ಈಕೆ? ಇಲ್ಲಿಗೆ ಯಾವಾಗ ಬಂದಳು. ಯಾಕೆ ಬಂದಳು. ಯಾರೊಡನೆ ಬಂದಳು. ಪಕ್ಕದ ಮನೆಯಲ್ಲಿರುವ ನನಗೆ ಯಾವಾಗ ಬಂದಳು ಅಂತಲೂ ಗೊತ್ತಿಲ್ಲವಲ್ಲಾ! ಬರೀ ಲೆಕ್ಕ ಪತ್ರ ನೋಡುವು ದರಲ್ಲೇ ಆಯ್ತಲ್ಲಾ ನನ್ನ ಜೀವನ ಎಂದು ಅರೆನಿಮಿಷ ಖಿನ್ನನಾದ.

ಮರಳಿ ಹಿಂದಿನ ದಿನದ ಲೆಕ್ಕ ಸರಿದೂಗಿದುದು ಹೊಳೆಯಿತು. ಸುಖಿಯಾದ. ತಿರುಗಿ ಒಂದು ದಂ ಎಳೆದು ಸ್ನಾನಕ್ಕೆ ಹೋದ. ಸಂಧ್ಯಾವಂದನೆ ಮುಗಿಸಿ ತಿಂಡಿ ಕೂತಾಗ ಮನೆಯಾಕೆ ಉಪ್ಪಿಟ್ಟು ತಂದಿಟ್ಟಳು. ರವೆ ಉಪ್ಪಿಟ್ಟು ಆಲೂಗಡ್ಡೆಯನ್ನು ತಿರುವಿ ಈರುಳ್ಳಿ, ರೇಖೆಗಳನ್ನಿಟ್ಟು ಉಪ್ಪಿಟ್ಟಿಗೆ ಶೃಂಗಾರ ಮಾಡಿತ್ತು. ಬಾಯಲ್ಲಿ ನೀರೂರಿತು. ಮನಸ್ಸು ನೈರುತ್ಯದ ಲೇಸಿನ ಪರದೆಯ ಮನೆಯಲ್ಲಿ ಈ ತೆರನಾದ ಕಲಾತ್ಮಕ ಉಪ್ಪಿಟ್ಟು ಸಿಗುತ್ತದೆಯೇ ಎಂದೆನಿಸಿತು. ಒಂದು ಚಂಚಾ ಉಪ್ಪಿಟ್ಟು ಬಾಯಿಗಿಟ್ಟ. ಉಪ್ಪಿಟ್ಟಿನಲ್ಲಿ ಉಪ್ಪೇ ಹೇಳಹೆಸರಾಗಿತ್ತು. ಸರಿಯಾಗಿ ಉಪ್ಪಿಟ್ಟನ್ನು ಕಲೆಸದಿರಬಹುದು, ನಾನೇ ಕಲೆಸುತ್ತೇನೆ ಎಂದು ಚಂಚದಲ್ಲೇ ತಟ್ಟೆಯ ಅಂಚನ್ನೂ ಮಾರದಂತೆ ಕಲೆಸತೊಡಗಿದ ಆ ವೇಳೆಗೆ ಮನೆಯಾಕೆ ಕಾಫಿ ತಂದಿಟ್ಟಳು. ದುರು ದುರು ನೋಡಿದಳು, ಈತ ನೋಡಲೇ ಇಲ್ಲ.

"ಲೇ!" ಅಂದ. ನಿರುತ್ತರ .."ಲೇ" "ಲೇ" ಅಂದ—ನಿರುತ್ತರೆ. ನಿರುತ್ತರದ ದನಿಯ ಅರಿವೇ ಇಲ್ಲ ಆತನಿಗೆ.

"ಲೇಸಿನ ಪರದೆಯ ಪಕ್ಕದ ಮನೆಗೆ ಯಾರು ಬಾಡಿಗೆಗೆ ಬಂದಿದ್ದಾರೆ" ಎಂದು ಕೇಳಿದ ಪೆಚ್ಚುಪೆಚ್ಚಾಗಿ.

"ಇದೇನೋ ಹೊಸ ನಮೂನೆ! ನಾನೇನು ಕುರುಡಿ ಅಂತ ತಿಳಿದುಕೊಂಡಿದ್ದೀರಾ! ಲೇಸಿನ ಪರದೆಯಲ್ಲೇ ಲಂಗ ಹೊಲಿಸಿಕೊಳ್ಳುವುದು ಅಂತ ನನಗೆ ತಿಳಿಯದು ಎಂದಲ್ಲವೇ ನೀವು ಈ ರೀತಿ ಕೇಳುವುದು" ಎಂದು ಮನೆಯಾಕೆಯ ಮಾರುತ್ತರ.

ಮನೆಯಾತನಿಗೆ ಏನೊಂದೂ ಅರ್ಥವಾಗಲಿಲ್ಲ. ಅಷ್ಟು ಹೊತ್ತೂ ಕಲೆಸಿದ ಉಪ್ಪಿಟ್ಟಿನ ಚಂಚ ಒಂದನ್ನು ಬಾಯಿಗಿಟ್ಟ. ಇನ್ನೂ ಉಪ್ಪುಪ್ಪೇ. ಆಗ ಅವನಿಗೆ ಅರ್ಥವಾಯಿತು. ಈ ಉಪ್ಪಿಟ್ಟಿನಲ್ಲಿ ಹಿಟ್ಟಿಲ್ಲ ಎಂದು. ಆಗಲೇ ತೋಚಿತು, ಆಕೆಯಾಡಿದ ಮಾತಿನಲ್ಲೂ ಇದೇ ರೀತಿ ಎಂದು.

ಹಿಂದೊಮ್ಮೆ ದ್ರೌಪದಿಯು ಇದೇ ರೀತಿ, ಅರ್ಜುನನ್ನು ಕೊಂಕು ನುಡಿದಿದ್ದಾಗ, ನಾರಾಯಣನಿಲ್ಲದ ಆ ನರ, ನರವಿರುವ ಹೆಣ್ಣಾಗ ಹಾಕಿಕೊಂಡು ಬೃಹನ್ನಡೆದನಂತೆ.

ಅದೇ ರೀತಿ ಮನೆಯಾತ ಬೃಹನ್ನಡೆಯುತ್ತಾ ಕೇರಿಯ ವಾಚನಾಲಯಕ್ಕೆ ಹೊರಟ. ಹಿಂದಿರುಗುವ ಊಟದ ಹೊತ್ತಿಗೆ ಉಪ್ಪಿಲ್ಲದಿದ್ದರೂ ಪರವಾಗಿಲ್ಲ, ಹಿಟ್ಟು ಸಿಕ್ಕರೆ ಸಾಕು, ಥಂಡಾ ಹಿಟ್ಟಾದರೂ ಆಯಿತು ಎನ್ನುವ ಆಶೆಯಿಂದ.

* * *

೧೦-೩೦ಕ್ಕೆ ಮನೆಗೆ ಬಂದ. ಪಿಟಕ್ ಪಟಕ್ ಎನ್ನದೆ ಹಾಕಿದನ್ನುಂಡ. ಕಚೇರಿಯಿಂದ ೫-೫ಕ್ಕೆ ಏದುಬ್ಬುಸಪಡುತ್ತಾ ಹಿಂದಿರುಗಿ ಬಂದ. ೫-೧೦ಕ್ಕೆ ಟೀ ಎಂದೆನ್ನಿಸಿಕೊಂಡ ಮಡದಿ ಕೊಟ್ಟ ಮದ್ದು ಕುಡಿದ. ೫-೧೧ಕ್ಕೆ ಸಿನೀಮಾ ಎಂದ. ೬-೨೯ಕ್ಕೆ ಆಕೆ ಸಿದ್ಧವಾದಳು. ೬-೩೦ಕ್ಕೆ ಇಬ್ಬರೂ ಓಡಿದರು. ೯ಕ್ಕೆ ಹಿಂತಿರುಗಿದರು. ಉಂಡು — ಮಲಗಿದರು — ನಗುನಗುತಾ.

— ಅತ್ತೆ —

ಆ ಭೈರಾಗಿ ತುಂಬು ಜೋಳಿಗೆಯಿಂದ ಹೊರಟವ ಖುಷಿಯಾಗಿ 'ಚಲಚಲರೇ ನವ್ ಜವಾನ್' ಹಾಡಿದ. ಹಾಡುತ್ತಿರುವಂತೆಯೇ ಸೌದೆ ಲಾರಿಯೊಂದು ಹಿಂಬಾಲಿಸಿತು. ಆ ಲಾರಿಯ ಡ್ರೈವರು ನೂರಾ ಇಪ್ಪತ್ತು ಮೈಲಿ ದೂರದಿಂದ ಕಣ್ಣಿಗೆ ಎಣ್ಣೆ ಸವರಿಕೊಂಡು ಸಾರಥ್ಯ ನಡೆಸಿದ್ದ. ಈ ಹಾಡು ಕೇಳಿದ. ತಾನೂ ಹಾರ್ನ ಮಾಡಿದ "ಚಲ್ ಚಲರೇ ದಾರೀ ಬಿಟ್ಟು" ಎಂದು. ಭೈರಾಗಿಗೆ ಕೇಳಿಸಲಿಲ್ಲ, ಡ್ರೈವರನಿಗೆ ಕಾಣಿಸಲಿಲ್ಲ, ಸೌದೆ ಲಾರಿ ಗುಮ್ಮಿತು. ಭೈರಾಗಿಯ ಬುಡುಬುಡಿಕೆ ಲಬೋ ಮಾಡಿತು. ಆದೇ ಲಾರಿಯಲ್ಲಿ ಭೈರಾಗಿಯನ್ನು ಆಸ್ಪತ್ರೆಗೆ ಸಾಗಿಸಿದ ಪೋಲೀಸಿನವ.

ಆಸ್ಪತ್ರೆಯಲ್ಲಿ ವೈದ್ಯ ಲಾರಿಯನ್ನು ನೋಡಿದ. ಅಪಘಾತಕ್ಕೆ ಒಳಗಾದ ಭೈರಾಗಿಯನ್ನೂ ನೋಡಿದ. ಪೆಟ್ಟುಗಳನ್ನೂ ಕಂಡ.

ಪೋಲೀಸಿನವನಿಗೆ ಹೇಳಿದ, "ಈತ ಜನಿವಾರ ಹಾಕಿದ್ದಾನೆ. ಏಟು ಹೆಚ್ಚಾಗಿದೆ. ಔಷಧಿ ಪ್ರಯೋಗ ತೀವ್ರ. ಸೌದೆ ತುಂಬಿದ ಲಾರಿ ಇಲ್ಲೇ ಇರಲಿ. ಇವನಿಗೇ ಬೇಕಾಗುತ್ತೆ" ಎಂದು.

ಭೈರಾಗಿಯನ್ನು ಕೇಳಿದ. ಏನೆಂದು? ನಿನಗೇನು ನೋವು ಎಂದಲ್ಲಾ! ನಿನ್ನ ಹತ್ತಿರ ಸಂಬಂಧೀಕರು ಯಾರೆಂದು. ಭೈರಾಗಿ ಒಮ್ಮೆ ಕಣ್ತೆರೆದ. ಈ ಕೋಣ ವೈದ್ಯನನ್ನು ಕಂಡ. ಕೋಣವಾಹನನ್ನೇ ಕಂಡಂತಾಯಿತು. ಆದರೂ ಹೇಳಿದ್ದು ಕೇಳಿಸಿತು ಊರಾಚಿನ ಮಾರಿಗುಡಿಯಲ್ಲಿ ನನ್ನ ಸೋದರ ದಾಸಣ್ಣ! ಎಂದ. ಅಲ್ಲಿಗೇ ಅವನು ದೈವ ದಾಸನಾಗಹತ್ತಿದ.

* * *

ಊರಾಚಿನ ಮಾರಿಗುಡಿಗೆ ಆ ಸೌದೇ ಲಾರೀ, ಆ ಪೋಲೀಸ್‌ನವನೊಂದಿಗೆ ಹೋಯ್ತು. ಆಗತಾನೇ ೯ ಗಂಟೆಗೆ ದಾಸಣ್ಣ ಎಚ್ಚೆತ್ತು ಕಣ್ಣುಜ್ಜಿಕೊಂಡಿದ್ದ. ಲಾರಿಯಲ್ಲೇ ಅರೆ ನಿದ್ರೆಯಲ್ಲೇ ದಾಸಣ್ಣ ದವಾಖಾನೆಗೆ ಬಂದ. ಭೈರಾಗಿಯನ್ನು ನೋಡಿದ. ತುಂಬು ಜೋಳಿಗೆಯನ್ನು ನೋಡಿದ. ಬೈರಣ್ಣಾ "ಬೇಗ ಏಕೆ ಎದ್ದೆ. ನಾನು ಹೇಳಲಿಲ್ಲವೆ ಸಾವಧಾನ ಅಂತ" ಅಂದ. ದಾಸಣ್ಣನ ಮಾತಿಗೆ ಎಚ್ಚೆತ್ತಂತಾದ ಬೈರಣ್ಣ ಹೇಳಿದ "ದಾಸಣ್ಣಾ ಸುಖವಾಗಿ ಸಾವಧಾನವಾಗಿ ಮಲಗಿದ್ದ ನೀನು ಈ ತುಂಬಿದ ಜೋಳಿಗೆಯನ್ನು ಸಾವಧಾನವಾಗಿ ಅನುಭವಿಸು. ನಾನು ಆತುರದವ ಅಲ್ಲಿಗೇ ಮೊದಲು ಹೋಗ್ತೇನೆ. ನೀನು ಬರುವ ವೇಳೆಗೆ ಅಲ್ಲಿ ಕೂಡ ನಿನ್ನ ಅನುಕೂಲ ನೋಡಿಕೋತೇನೆ" ಎಂದು ಹೇಳಿ ಉಸಿರು ನಿಲ್ಲಿಸಿದ. ದಾಸಣ್ಣ ಜೋಳಿಗೆಯನ್ನು ಹೊರಲಾರದೆ ಹೊತ್ತು ಹಿಂತಿರುಗಿದ.

ನೀತಿ:—ಹುಟ್ಟಿಸಿದ ದೇವರು ಮಣ್ಣುಗೂಡಿಸಿಯೋ ಕೂಡಿಸುತ್ತಾರೆ. ಈ ಅಣು ಯುಗದಲ್ಲಿ—ಆತುರಪಡಬೇಡಿ.

—"ವೇದಾಂತಿ ಬಚ್ಚ"

ಶೀಘ್ರದಲ್ಲಿಯೇ ಪ್ರದರ್ಶನ ನಿರೀಕ್ಷಿಸಿ!

ವಿನೋದಾರವರ—

ಚಿರಂಜೀವುಲು

(ತೆಲುಗು)

★

ತಾರಾಗಣ:

ಜಮುನ - ಬಾಲಸರಸ್ವತಿ - ಎನ್. ಟಿ. ರಾಮರಾವ್
ಸಿ. ಎಸ್. ಆರ್.

★

ದಿಗ್ದರ್ಶನ:

ವೇದಾಂತಂ ರಾಘವಯ್ಯ

★

ವಿನೋದಾರವರ—

ಅಮರ ಗೀತಂ

—(ತಮಿಳು)

★

ಹಂಚಿಕೆದಾರರು:

VIKRAM PICTURES,

6, COTTONPET, : : BANGALORE-2.

TELEPHONE NO 2906

Printed by B S Iyengar, Bangalore City.